ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 3, 2025

ಸಂಪುಟ : 51 ಸಂಚಿಕೆ : 290 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




12 ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದಾದ ಗುಜರಾತ್‌ನ ಗಿರ್ ಸೋಮನಾಥ ಜಿಲ್ಲೆಯ ಇತಿಹಾಸ ಪ್ರಸಿದ್ಧ ಸೋಮನಾಥ ದೇವಾಲಯಕ್ಕೆ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಸೋಮನಾಥ ಶಿವ ದೇಗುಲದಲ್ಲಿ ಪ್ರಧಾನಿ ಮೋದಿ ಪೂಜೆ ಸಲ್ಲಿಸಿದರು. ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಬಳಿಕ ಸೋಮನಾಥ ದೇವಾಲಯಕ್ಕೆ ಭೇಟಿ ನೀಡುವುದಾಗಿ ಪ್ರಧಾನಿ ಮೋದಿ ಹೇಳಿಕೆ ನೀಡಿದ್ದರು.

## ಜಿಲ್ಲೆಗಳಲ್ಲಿ ಧನ್ವಂತರಿ ವನಕ್ಕೆ ಚಿಂತನೆ

### ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನದಲ್ಲಿ ಸಚಿವ ಈಶ್ವರ ಖಂಡ್ರೆ



ಬೀದರ್, ಮಾ.2- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಧನ್ವಂತರಿ ವನ ನಿರ್ಮಿಸುವುದರ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಆಶ್ವಾಸನೆ ನೀಡಿದ್ದಾರೆ.

ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಪಾರಂಪರಿಕ ವೈದ್ಯ ಪರಿಷತ್ ಕರ್ನಾಟಕ, ಕಲ್ಯಾಣ ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಹಾಗೂ ಬೀದರ್ ಜಿಲ್ಲಾಡಳಿತದ ಸಹಯೋಗದೊಂದಿಗೆ ನಗರದಲ್ಲಿ ಭಾನುವಾರ ಏರ್ಪಡಿಸಿದ್ದ 15ನೇ ರಾಜ್ಯಮಟ್ಟದ ಮೂರು ದಿನಗಳ ಪಾರಂಪರಿಕ ವೈದ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಕಡೆಗಳಲ್ಲಿ ಪಾರಂಪರಿಕ ವೈದ್ಯ ಪರಿಷತ್ ಭವನ ನಿರ್ಮಾಣ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿ ವರ್ಷ ಪಾರಂಪರಿಕ ವೈದ್ಯ ಸಮ್ಮೇಳನಕ್ಕೆ ಅನುದಾನ ನೀಡುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಈ ಕುರಿತು ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

ಸರ್ಕಾರವು ಮೊದಲ ಬಾರಿಗೆ ಬೃಹತ್ ಪ್ರಮಾಣದಲ್ಲಿ ಇಂತಹ ಸಮ್ಮೇಳನವನ್ನು ಆಯೋಜಿಸಿದೆ. ವೈದ್ಯ ಪರಿಷತ್ ಪದಾಧಿಕಾರಿಗಳು ನೀಡಿದ ವಿವಿಧ ರೀತಿಯ ಬೇಡಿಕೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಶೀಲಿಸಲಾಗುವುದು ಎಂದರು.

ರಾಜ್ಯದ ಎಲ್ಲ ಔಷಧೀಯ ಸಸ್ಯಗಳನ್ನು ದಾಖಲಿಸಿ ಮನಕುಲದ ಒಳಿತಿಗಾಗಿ ಉಪಯೋಗಿಸುವ ಹಿನ್ನೆಲೆಯಲ್ಲಿ ಜೀವ ವೈವಿಧ್ಯ (4ನೇ ಪುಟಕ್ಕೆ)

## ಅನಧಿಕೃತ ಸ್ವತ್ತುಗಳಿಗೆ ಇ-ಖಾತಾ ಕಾಯ್ದೆ-ನಿಯಮಗಳ ತಿದ್ದುಪಡಿ

ದಾವಣಗೆರೆ, ಮಾ.2- ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಸ್ವತ್ತುಗಳಿಗೆ ಇ-ಖಾತಾ ನೀಡುವ ಸಂಬಂಧ ಕಾಯ್ದೆ ಮತ್ತು ನಿಯಮಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಆಸ್ತಿ ಮಾಲೀಕರು ತಮ್ಮ ಆಸ್ತಿಗಳಿಗೆ ಈ ಕೆಳಕಂಡ ದಾಖಲೆಗಳನ್ನು ನೀಡಿ ಇ-ಖಾತಾ ಪಡೆದುಕೊಳ್ಳಬಹುದು. ಇದರಿಂದ ಅನಧಿಕೃತ ಸ್ವತ್ತುಗಳ ಮಾಲೀಕರು ತಮ್ಮ ಸ್ವತ್ತಿನ ಕಂದಾಯವನ್ನು ಪಾವತಿಸಿ, ಇ-ಖಾತಾ ಪಡೆಯಬಹುದು. ಸ್ವತ್ತಿನ ಮಾಲೀಕರು ತಮ್ಮ ನಗರ ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ, ಅಧಿಕೃತ ಆಸ್ತಿಗಳಿಗೆ ಇ-ಖಾತಾ ಪಡೆಯಲು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

ಸ್ವತ್ತಿನ ಮಾಲೀಕತ್ವದ ದಾಖಲೆಗಳಾದ ನೋಂದಾಯಿತ ಪತ್ರಗಳು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ದೃಢೀಕೃತ ಪ್ರತಿ ಮತ್ತು ನಿವೇಶನಗಳ ಬಿಡುಗಡೆ ಪತ್ರ, ಚಾಲ್ತಿ ಸಾಲಿನವರೆಗೆ ಕಂದಾಯ ಪಾವತಿ ರಶೀದಿ, ಋಣಭಾರ ಪ್ರಮಾಣ ಪತ್ರ ಹಾಗೂ ಮಾಲೀಕರ ಫೋಟೋ, ಆಸ್ತಿ ಇರುವ ಸ್ಥಳದ ಫೋಟೋ, ಮಾಲೀಕರ ಗುರುತಿನ ದಾಖಲೆ ಪ್ರತಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಸಲ್ಲಿಸಿದ 7 ದಿನಗಳ ಒಳಾಗಾಗಿ ಇ-ಖಾತಾ ಪಡೆಯಬಹುದು.

**ಅನಧಿಕೃತ ಸ್ವತ್ತುಗಳಿಗೆ ಇ-ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು :** ಆಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕ ಸಾಬೀತುಪಡಿಸುವ ಸೆಪ್ಟೆಂಬರ್ 10, 2024ರ ಪೂರ್ವದಲ್ಲಿ ನೋಂದಾಯಿತ ಮಾರಾಟ ಪತ್ರಗಳು, ದಾನಪತ್ರ, ವಿಭಾಗ ಪತ್ರಗಳು, ಹಕ್ಕು ಖುಲಾಸೆ ಪತ್ರಗಳು, (3ನೇ ಪುಟಕ್ಕೆ)

## ಮತದಾರರ ಗುರುತಿನ ಚೀಟಿ ಸಂಖ್ಯೆ ದ್ವಿಬಳಕೆಯಾದರೆ ನಕಲಿ ಮತದಾರರ ಎಂದಲ್ಲ

ನವದೆಹಲಿ, ಮಾ. 2 - ಎರಡು ಬೇರೆ ಬೇರೆ ರಾಜ್ಯಗಳ ಮತದಾರರ ಗುರುತಿನ ಚೀಟಿಗಳಲ್ಲಿ ಒಂದೇ ಸಂಖ್ಯೆ ಇರುವ ಬಗ್ಗೆ ಸ್ಪಷ್ಟನೆ ನೀಡಿರುವ ಚುನಾವಣಾ ಆಯೋಗ, ಸಂಖ್ಯೆಗಳ ಪುನರಾವರ್ತನೆ ಆದ ಕಾರಣಕ್ಕೆ ನಕಲಿ ಮತದಾರರು ಎಂದರ್ಥವಲ್ಲ ಎಂದು ತಿಳಿಸಿದೆ.

ಮತದಾರರ ಗುರುತಿನ ಚೀಟಿಯ ಸಂಖ್ಯೆ ಒಂದೇ ಆಗಿರಬಹುದು. ಆದರೆ ವಿಳಾಸ, ವಿಧಾನಸಭಾ ಕ್ಷೇತ್ರ ಹಾಗೂ ಮತಗಟ್ಟೆಗಳ ವಿವರ ಬೇರೆ ಬೇರೆ ಆಗಿರುತ್ತವೆ ಎಂದು ಆಯೋಗ ತಿಳಿಸಿದೆ.

ಮತದಾರ ಗುರುತಿನ ಚೀಟಿ ಸಂಖ್ಯೆ ಒಂದೇ ಆಗಿದ್ದರೂ ಸಹ, ನೀವು ಮತಗಟ್ಟೆಯಲ್ಲಿ ಮತದಾನ ಮಾಡಬಹುದು (4ನೇ ಪುಟಕ್ಕೆ)

## ವಿಶ್ವದಲ್ಲಿ ಶೇ. 40ರಷ್ಟು ಜನರಿಗೆ ಮಾತೃಭಾಷಾ ಶಿಕ್ಷಣ ಲಭ್ಯವಿಲ್ಲ

ನವದೆಹಲಿ, ಮಾ. 2 - ವಿಶ್ವದ ಶೇಕಡ 40ರಷ್ಟು ಜನರಿಗೆ ತಾವು ಮಾತನಾಡುವ ಹಾಗೂ ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿ ಶಿಕ್ಷಣ ಲಭ್ಯವಾಗುತ್ತಿಲ್ಲ ಎಂದು ಯುನೆಸ್ಕೋದ ಗ್ಲೋಬಲ್ ಎಜುಕೇಶನ್ ಮಾನಿಟರಿಂಗ್ (ಜಿಇಎಂ) ತಂಡ ತಿಳಿಸಿದೆ.

ಮಾತೃಭಾಷೆಯಲ್ಲಿ ಕಲಿಕಾ ವ್ಯವಸ್ಥೆ ಮಾಡುವುದರಿಂದ ಆಗುವ ಲಾಭಗಳ ಬಗ್ಗೆ ದೇಶಗಳಿಗೆ ಅರ್ಥವಾಗುತ್ತಿದೆ. ಆದರೆ ಈ ದಿಸೆಯಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮಗಳಲ್ಲಿ ಕೊರತೆ ಇದೆ. ಶಿಕ್ಷಕರ ಕೊರತೆ, ಅಗತ್ಯ ಉಪಕರಣಗಳ ಕೊರತೆ ಹಾಗೂ ಸಮುದಾಯದ ಬೆಂಬಲದ ಕೊರತೆಯಿಂದಾಗಿ ಮಾತೃಭಾಷೆ ಶಿಕ್ಷಣ ಸಾಧ್ಯವಾಗುತ್ತಿಲ್ಲ ಎಂದು ವರದಿ ಹೇಳಿದೆ.

ಕೆಲ ಕಡಿಮೆ ಆದಾಯದ ಹಾಗೂ ಮಧ್ಯಮ ಆದಾಯದ ದೇಶಗಳಲ್ಲಿ ಮಕ್ಕಳಿಗೆ ಅರಿವಿರುವ ಭಾಷೆಯಲ್ಲಿ ಬೋಧಿಸಲು ಸಾಧ್ಯವಾಗದ 90% ರಷ್ಟು ಪ್ರಕರಣಗಳಿವೆ. ಇದರಿಂದಾಗಿ ವಿಶ್ವದ 100 ಕೋಟಿಗೂ ಹೆಚ್ಚು ಮಕ್ಕಳ ಕಲಿಕೆಗೆ ತೊಡಕಾಗಿದೆ ಎಂದು ವರದಿ ತಿಳಿಸಿದೆ. (3ನೇ ಪುಟಕ್ಕೆ)

## ಹಾವೇರಿ ಜಿಲ್ಲಾ ಹಾಲು ಒಕ್ಕೂಟ; ಕೈ ವಶಕ್ಕೆ



ರಾಣೇಬೆನ್ನೂರು, ಮಾ.2- ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ರಾಣೇಬೆನ್ನೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಂಜನಗೌಡ ಪಾಟೀಲ ಅವರು ತಮ್ಮ ಎದುರಾಳಿ ಬಿಜೆಪಿಯ ಸಿದ್ಲಿಂಗಪ್ಪ ಅವರಿಗಿಂತ 10 ಮತಗಳನ್ನು ಅಧಿಕ ಪಡೆದು ಆಯ್ಕೆಯಾಗಿದ್ದಾರೆ. ಜಿಲ್ಲೆಯ ಒಟ್ಟು 8 ಕ್ಷೇತ್ರಗಳಲ್ಲಿ ಇಂದು ಚುನಾವಣೆ ನಡೆದಿದ್ದು 6 ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಿವೆ. ಒಕ್ಕೂಟ ಇದುವರೆಗೂ ಬಿಜೆಪಿ ಆಡಳಿತದಲ್ಲಿದ್ದು. ಈಗ ಪ್ರಥಮ ಬಾರಿಗೆ ಕಾಂಗ್ರೆಸ್ ವಶವಾಗಿದೆ ಎಂದು ಹೇಳಲಾಗಿದೆ.

## ಸತ್ಯ ಶರಣರಿಗೆ ನಿತ್ಯವೂ ಶಿವರಾತ್ರಿ: ಲೀಲಾಜಿ

### ಈಶ್ವರೀಯ ವಿವಿ ಶಾಖೆಯ ಗೀತಪಾಠ ಶಾಲೆಯ ರಜತ ಮಹೋತ್ಸವ ಸಮಾರಂಭ



ದಾವಣಗೆರೆ, ಮಾ. 2- ಎಲ್ಲಾ ಧರ್ಮಗಳು ಪರಮಾತ್ಮನನ್ನು ಜ್ಯೋತಿ ರೂಪದಲ್ಲಿ ಕಾಣುತ್ತೇವೆ. ಅಂತಹ ಜ್ಯೋತಿಯು ನಮ್ಮ ಆತ್ಮದ ಜೊತೆ ಅನುಸಂಧಾನ ಹೊಂದಬೇಕಾಗಿದೆ. ಸತ್ಯ ಶರಣರಿಗೆ ನಿತ್ಯವೂ ಶಿವರಾತ್ರಿ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಪ್ರತಿಪಾದಿಸಿದರು.

ಸ್ಥಳೀಯ ಆಂಜನೇಯ ಬಡಾವಣೆ 15 ನೇ ಕ್ರಾಸ್‌ನಲ್ಲಿರುವ ಈಶ್ವರೀಯ ವಿಶ್ವವಿದ್ಯಾಲಯದ ಗೀತ ಪಾಠ ಶಾಲೆಯ ರಜತ ಮಹೋತ್ಸವ ಹಾಗೂ ಶಿವರಾತ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿವರಾತ್ರಿ ಅಂಗವಾಗಿ ದ್ವಾದಶ ಜ್ಯೋತಿರ್ಲಿಂಗಗಳ ದಿವ್ಯ ದರ್ಶನ ಸೇರಿದಂತೆ, ವಿವಿಧ ಅಧ್ಯಾತ್ಮಿಕ ಕಾರ್ಯಕ್ರಮಗಳನ್ನು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಹಮ್ಮಿಕೊಂಡು ಬರುತ್ತಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆಯವರು ಹೇಗೆ ಪ್ರತಿ ವಾರ್ಡಿನಲ್ಲಿ ಶಾಲೆ, ಉದ್ಯಾನವನ, ಆಸ್ಪತ್ರೆ ತೆರೆಯುವ ಉದ್ದೇಶವನ್ನು ಹೊಂದಿರುತ್ತಾರೋ ಹಾಗೆಯೇ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯ ಶಾಖೆಗಳನ್ನು ಪ್ರತಿ ವಾರ್ಡ್‌ಗಳಲ್ಲೂ ತೆರೆದಿದ್ದೇವೆ. ಇರುವ ವಾರ್ಡ್‌ಗಳಿಗಿಂತ ಹೆಚ್ಚು ಶಾಖೆಗಳನ್ನು ನಡೆಸಲಾಗುತ್ತಿದೆ. ನಗರದ 70 ಕೇಂದ್ರಗಳಲ್ಲಿ ಈಶ್ವರನ ಸಂದೇಶ ಸಾರುವ, ಶಿವನ ಧ್ಯಾನದ ಕಾರ್ಯವು ನಿರಂತರವಾಗಿ ನಡೆಯುತ್ತಿದ್ದು, ಆಂಜನೇಯ ಬಡಾವಣೆಯಲ್ಲಿಯೇ ಮೂರು ಶಾಖೆಗಳನ್ನು ತೆರೆಯಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬ್ರಹ್ಮಾಕುಮಾರಿ ಸಂಸ್ಥೆ ವತಿಯಿಂದ ಶಿವರಾತ್ರಿ ಆಚರಣೆಯನ್ನು ತಿಂಗಳ ಕಾಲ ಮಾಡುತ್ತೇವೆ. ಬ್ರಹ್ಮಾಕುಮಾರಿ ಈಶ್ವರೀಯ ವಿವಿ ವಿದ್ಯಾರ್ಥಿಗಳಿಗೆ ನಿತ್ಯವೂ ಉಪವಾಸ, ಜಾಗರಣೆ, ಸತ್ಯ ಶಿವ ಶರಣರಿಗೆ ನಿತ್ಯವೂ ಶಿವರಾತ್ರಿ ಎಂದು ಹೇಳುತ್ತಾರೆ. ನಮ್ಮ ಜೀವನದಲ್ಲಿ ಪ್ರತಿ ನಿತ್ಯವೂ ಶಿವನ ಮಿಲನ, ಧ್ಯಾನ ನಡೆಯುತ್ತಲೇ ಇರುತ್ತದೆ ಎಂದು ಲೀಲಾಜಿ ವಿವರಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶಿವ ಸಹಕಾರಿ ಬ್ಯಾಂಕಿನ ಅಧ್ಯಕ್ಷರೂ, ವರ್ತಕರೂ ಆದ ಮಾಗನೂರು ಸಂಗಮೇಶ್ವರ ಗೌಡರು ಮಾತನಾಡಿ, ಈಶ್ವರೀಯ ವಿವಿಯ (2ನೇ ಪುಟಕ್ಕೆ)

ಸವಿನೆನಪು



ಲಿಂ॥ ಶ್ರೀ ಎಂ.ಜಿ. ತಿಪ್ಪೇಸ್ವಾಮಿ
ನಗರಸಭೆ ಮಾಜಿ ಅಧ್ಯಕ್ಷರು ಮತ್ತು
ಕಾರ್ಮಿಕ ಮುಖಂಡರು, ದಾವಣಗೆರೆ.
ನಿಧನ : 03-03-2020
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಬಂಧುಗಳು ಮತ್ತು ಮಿತ್ರರು.

ಎರಡನೇ ವರ್ಷದ ಪುಣ್ಯಸ್ಮರಣೆ



ಲಿಂ॥ ಶ್ರೀ ಕೆ.ಜಿ. ರವೀಂದ್ರರವರು
ನಿವೃತ್ತ ದೈಹಿಕ ಶಿಕ್ಷಣ ಉಪನ್ಯಾಸಕರು, ಶಿವಮೊಗ್ಗ.
(ಮರಣ : 24.02.2023)
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ನೀವು ತೋರಿದ ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ನೆನಪಿನಲ್ಲಿರುವ...
ಧರ್ಮಪತ್ನಿ : ಶ್ರೀಮತಿ ಮಮತ ಕೆ.ಜಿ.
ದಿ॥ ಶ್ರೀ ಕೆ.ಜಿ. ಬಸಪ್ಪ, ಶ್ರೀಮತಿ ದಿ॥ ಕೆ.ಜಿ. ಶಾಂತಮ್ಮ ಮತ್ತು ಮಕ್ಕಳು, ಕಂದಗಲ್ಲು. ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕೊಟ್ರಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 9844016928, 9945949029
ಇಂದು (ದಿನಾಂಕ : 03.03.2025ರ ಸೋಮವಾರ) ಬೆ. 11 ರಿಂದ 12ರ ವರೆಗೆ ಹಿರಿಯರ 'ತಿಥಿ' ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ, ಸರ್ವ ಬಂಧುಗಳು ಆಗಮಿಸಬೇಕಾಗಿ ವಿನಂತಿ.



# ಗಾಂಧೀಜಿ ಪರಿಕಲ್ಪನೆಯಲ್ಲಿ ಗ್ರಾಮ ಪಂಚಾಯ್ತಿಗಳು ಕೆಲಸ ಮಾಡಲಿ

## ಕುಂಬಳೂರು : ಗ್ರಾ.ಪಂ. ನೂತನ ಕಟ್ಟಡ ಉದ್ಘಾಟನೆಯಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್



ಮಲೇಬೆನ್ನೂರು, ಮಾ.2- ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಪರಿಕಲ್ಪನೆಯಲ್ಲಿ ಗ್ರಾಮ ಪಂಚಾಯ್ತಿಗಳು ಕೆಲಸ ಮಾಡಬೇಕೆಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯಪಟ್ಟರು.

ಕುಂಬಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾ.ಪಂ.ನ 'ಗ್ರಾಮ ಸೌಧ' ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿ ಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಗ್ರಾ.ಪಂ. ವ್ಯವಸ್ಥೆಯಲ್ಲಿ ಅದರದ್ದೇ ಆದ ಬಜೆಟ್ ಇದೆ. ನೀವು ನಿಮ್ಮ ಗ್ರಾಮದ ಸಮಸ್ಯೆಗಳನ್ನು ತಿಳಿದುಕೊಂಡು ಪಾರದರ್ಶಕವಾಗಿ ಕೆಲಸ ಮಾಡುವ ಜವಾಬ್ದಾರಿ ನಿಮ್ಮಲಿದೆ ಎಂದು ಗ್ರಾ.ಪಂ. ಸದಸ್ಯರಿಗೆ ಕಿವಿಮಾತು ಹೇಳಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ಸ್ಥಳೀಯವಾಗಿ ನೀವೇ ಮಾಡಬೇಕೆಂದು ಗ್ರಾ.ಪಂ. ಸದಸ್ಯರಿಗೆ ತಿಳಿಸಿದ ಪ್ರಭಾ, ಕುಂಬಳೂರು ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಸಮುದಾಯ ಭವನಕ್ಕೆ 15 ಲಕ್ಷ ರೂ. ಅನುದಾನ ಮತ್ತು ಹೈಮಾಸ್ಟ್ ದೀಪಕ್ಕೆ 5 ಲಕ್ಷ ರೂ. ಅನುದಾನ ನೀಡಿದ್ದೇನೆ. ಗ್ರಾಮದ ಇನ್ನಿತರೆ ಬೇಡಿಕೆಗಳಿಗೆ ಹಂತ ಹಂತವಾಗಿ ಸ್ಪಂದಿಸುತ್ತೇನೆಂದರು.

ಹರಿಹರ ತಾಲ್ಲೂಕು ನನ್ನ ತವರು ಮನೆ ಇದ್ದಂತೆ. ಕುಂಬಳೂರಿನಲ್ಲಿ ನಮ್ಮ ಹತ್ತಿರದ ಸಂಬಂಧಿಗಳ ಮನೆ ಇರುವ ಕಾರಣ, ನಾನು ಇಲ್ಲಿ ನನ್ನ ಬಾಲ್ಯವನ್ನು ಹೆಚ್ಚು ಕಳೆದಿದ್ದೇನೆ. ಈ ಗ್ರಾಮದ ಅಭಿವೃದ್ಧಿ ನನ್ನ ಜವಾಬ್ದಾರಿ ಎಂದು ಪ್ರಭಾ ಮಲ್ಲಿಕಾರ್ಜುನ್ ಗ್ರಾಮಸ್ಥರಿಗೆ ಭರವಸೆ ನೀಡಿದರು.

ಶಿವಮೊಗ್ಗ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವಂತೆ ನಾನು ಈಗಾಗಲೇ 2 ಬಾರಿ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ಮನವಿ ಮಾಡಿದ್ದೇನೆ. ಅವರೂ ಕೂಡ ಸೂಕ್ತ ಸ್ಪಂದನೆ ನೀಡಿದ್ದು, ಮುಂದಿನ ದಿನಗಳಲ್ಲಿ ರಸ್ತೆ ಕೆಲಸ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಂದಿರಾ ಆವಾಸ್ ಮನೆಗಳ ನಿರ್ಮಾಣಕ್ಕೆ ಈಗಿರುವ ಅನುದಾನ ಹೆಚ್ಚಿಸುವಂತೆ ಮತ್ತು ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನೂ ಹೆಚ್ಚಿಸುವಂತೆ ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದೇನೆ ಎಂದು ಸಂಸದರು ತಿಳಿಸಿದರು.

ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರು ಸರಾಗವಾಗಿ ತಲುಪುವಂತೆ ಮಾಡಲು ಕಾಲುವೆಗಳ ರಿಪೇರಿಗೆ 150 ಕೋಟಿ ರೂ. ಅನುದಾನ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ ಎಂದು ಪ್ರಭಾ ಹೇಳಿದರು.

ಗ್ರಾ.ಪಂ. ನೂತನ ಕಟ್ಟಡವನ್ನು ಉದ್ಘಾಟಿಸಿದ ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಈ ಕಟ್ಟಡಕ್ಕೆ 20 ಲಕ್ಷ ರೂ. ಅನುದಾನ ನೀಡಿರುವುದು ಸಾರ್ಥಕವಾಗಿದೆ. ಉತ್ತಮ ಕಟ್ಟಡ ನಿರ್ಮಿಸಿದ್ದಾರೆ. ಅದೇ ರೀತಿ ಗ್ರಾಮದ ಅಭಿವೃದ್ಧಿಗಾಗಿ ಉತ್ತಮ ಕೆಲಸಗಳನ್ನು ಮಾಡಿ ಎಂದು ಗ್ರಾ.ಪಂ. ಸದಸ್ಯರಿಗೆ ಹೇಳಿದರು.

ನಾವು ಎಷ್ಟೇ ಪ್ರಯತ್ನ ಮಾಡಿದರೂ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ನೀರು ಹರಿಯುತ್ತಿಲ್ಲ. ಹರಿಹರ ತಾಲ್ಲೂಕಿನ ಶೇ.40 ರಷ್ಟು ಭದ್ರಾ ಅಚ್ಚುಕಟ್ಟಿಗೆ ನೀರಿನ ಸಮಸ್ಯೆ ಎದುರಾಗಿದೆ. ಈ ಸಮಸ್ಯೆ ನೀಗಿಸಲು ಭೈರನಪಾದ ಏತ ನೀರಾವರಿ ಯೋಜನೆ ಮತ್ತು ಕೆರೆಗಳಿಗೆ ನದಿ ನೀರು ಹರಿಸುವ ಕೆಲಸ ಆಗಬೇಕಿದೆ. ಇದಕ್ಕೆ ಸಚಿವರು, ಸಂಸದರು ಸಹಕರಿಸಬೇಕೆಂದು ಹರೀಶ್ ಹೇಳಿದರು.

> **ಮನೆಗಳ ಬೇಡಿಕೆ ಹೆಚ್ಚಿದೆ. ಆದರೆ, ಸರ್ಕಾರ ಮನೆಗಳನ್ನು ನೀಡುತ್ತಿಲ್ಲ. ಸಂಸದರು ಹರಿಹರ ತಾಲ್ಲೂಕಿನ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು.**
> **- ಶಾಸಕ ಬಿ.ಪಿ. ಹರೀಶ್**

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್.ಶಿವರಾಮ ಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ವೈ.ವಿರೂಪಾಕ್ಷಪ್ಪ, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಹನಗವಾಡಿ ಕುಮಾರ್, ಎಂ.ಬಿ.ಅಬೀದ್ ಅಲಿ, ಜಿ. ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಗುತ್ತೂರು ಹಾಲೇಶಗೌಡ, ಕೆ.ತೀರ್ಥಪ್ಪ, ನಿಟ್ಟೂರಿನ ಕೆ.ಏಕಾಂತಪ್ಪ, ಕೆ.ಕಾಮರಾಜ್, ಗ್ರಾ.ಪಂ. ಉಪಾಧ್ಯಕ್ಷ ಜಿ.ಎಂ.ಹರೀಶ್, ತಾ.ಪಂ. ಇಓ ಸುಮಲತಾ ಸೇರಿದಂತೆ ಗ್ರಾ.ಪಂ.ನ ಸರ್ವ ಸದಸ್ಯರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

ಪಿಡಿಓ ನರಸಿಂಹಮೂರ್ತಿ ಸ್ವಾಗತಿಸಿರು. ಗ್ರಾ.ಪಂ. ಸದಸ್ಯ ಕೆ.ಹೆಚ್.ನಾಗೇಂದ್ರ ನಿರೂಪಿಸಿದರು. ಗ್ರಾ.ಪಂ. ಸದಸ್ಯ ಎನ್.ಜೆ. ಕಲ್ಲೇಶ್ ವಂದಿಸಿದರು.

# ಡಿಸೆಂಬರ್ ಹೊತ್ತಿಗೆ ಡಿ.ಕೆ. ಶಿವಕುಮಾರ್ ಸಿಎಂ ಆಗ್ತಾರೆ

ದಾವಣಗೆರೆ, ಮಾ.2- ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಡಿಸೆಂಬರ್ ಹೊತ್ತಿಗೆ ರಾಜ್ಯದ ಮುಖ್ಯಮಂತ್ರಿ ಆಗುವುದು ನಿಶ್ಚಿತ. ಅನುಮಾನ ಇರುವವರಿಗೆ ರಕ್ತದಲ್ಲಿ ಬರೆದುಕೊಡುತ್ತೇನೆ ಎಂದು ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



**ಅನುಮಾನ ಇರುವವರಿಗೆ ರಕ್ತದಲ್ಲಿ ಬರೆದು ಕೊಡುತ್ತೇನೆ ಎಂದ ಶಾಸಕ**

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಗಾದಿಯನ್ನು ಹೈಕಮಾಂಡ್ ನೀಡಲಿದೆ ಎಂಬ ಅಚಲ ನಂಬಿಕೆ ಇದೆ. ವರ್ಷಾಂತ್ಯಕ್ಕೆ ಮುಖ್ಯಮಂತ್ರಿಯಾದರೆ ಮುಂದಿನ ಅವಧಿಗೂ ಅವರೇ ಮುಂದುವರಿಯಲಿದ್ದಾರೆ. ಏಳೂವರೆ ವರ್ಷ ರಾಜ್ಯದ ಮುಖ್ಯಮಂತ್ರಿ ಆಗಲಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವಲ್ಲಿ ಡಿಕೆಶಿ ಅವರ ಪಾತ್ರ ಪ್ರಮುಖವಾದದ್ದು. ಪಕ್ಷಕ್ಕಾಗಿ ಹಣ ಖರ್ಚು ಮಾಡಿದ್ದಾರೆ. ಅವರ ಮೌನವನ್ನು ದೌರ್ಬಲ್ಯ ಎಂದು ಭಾವಿಸಬೇಕಿಲ್ಲ. ಅವರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿದ್ದೇವೆ. ಅವರು ಎಲ್ಲಿ ಇರುತ್ತಾರೊ ಅಲ್ಲಿ ನಾವೂ ಇರುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಆಗುವುದು ಖಚಿತವಾದ ಬಳಿಕ ಡಿ.ಕೆ.ಶಿವಕುಮಾರ್ ವಿರುದ್ಧ ಕೆಲವರು ಅಸಮಾಧಾನ ಹೊರ ಹಾಕುತ್ತಿದ್ದಾರೆ. ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆಯಿಂದ ಪಕ್ಷ ಹಾಗೂ ಸರ್ಕಾರಕ್ಕೆ ಮುಜುಗರವಾಗುತ್ತಿದೆ. ಪಕ್ಷಕ್ಕೆ ಯಾರೂ ಅನಿವಾರ್ಯವಲ್ಲ. ಹೈಕಮಾಂಡ್ ಕೂಡಲೇ ಮಧ್ಯಪ್ರವೇಶ ಮಾಡಿ ರಾಜಣ್ಣ ಅವರ ಬಾಯಿ ಮುಚ್ಚಿಸಬೇಕು ಎಂದು ಆಗ್ರಹಿಸಿದರು.

# 83ರ ವಸಂತಕ್ಕೆ ಸೋಮಣ್ಣ



ದಾವಣಗೆರೆ ನಗರದಲ್ಲಿ ಬಿಜೆಪಿ ಹುಟ್ಟು ಹಾಕಿದವರಲ್ಲಿ ಒಬ್ಬರಾಗಿ, ಪಕ್ಷದ ಅಭ್ಯುದಯಕ್ಕೆ ಶ್ರಮಿಸಿದ ಹಿರಿಯರು ಹಾಗೂ ಸಾಮಾಜಿಕ ಸೇವಾ ಕಳಕಳಿಯ ವ್ಯಕ್ತಿ ಜೆ. ಸೋಮನಾಥ್ ಅವರು ಇಂದು 83ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

ದಾವಣಗೆರೆಯಲ್ಲಿ ಬಿಜೆಪಿ ಎಂದಾಕ್ಷಣ ಇಂದಿಗೂ ಸೋಮಣ್ಣನವರ ಹೆಸರು ಮುಂಚೂಣಿಯಲ್ಲಿ ಬರುತ್ತದೆ. ಮೂರು ದಶಕಗಳ ಕಾಲ ಪಕ್ಷದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅವರು 'ಬಿಜೆಪಿ ಸೋಮಣ್ಣ' ಎಂದೇ ಹೆಸರಾಗಿದ್ದಾರೆ.

3-03-1943ರಂದು ಷಡಾಕ್ಷರಯ್ಯ ಮತ್ತು ವೀರಮ್ಮ ದಂಪತಿಯ ಪುತ್ರರಾಗಿ ಜನಿಸಿದ ಸೋಮಣ್ಣ, ಬಿಎಸ್ಸಿ ಪದವೀಧರರು. ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ವೃತ್ತಿ ಜೀವನ ಆರಂಭಿಸಿದ ಅವರು, ತಮ್ಮ ಬಾಳ ಸಂಗಾತಿ ಶ್ರೀಮತಿ ಜೆ. ಶಾಂತಮ್ಮ ಅವರೊಂದಿಗೆ ತುಂಬು ಜೀವನ ಸಾಗಿಸಿದ್ದಾರೆ.

ಅನೇಕ ಸಂಘ - ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡು ಸಾಮಾಜಿಕ ಮತ್ತು ಧಾರ್ಮಿಕ ಸೇವೆ ಸಲ್ಲಿಸುತ್ತಿದ್ದಾರೆ. ಜೆ.ಸಿ. ಅಧ್ಯಕ್ಷರಾಗಿ, ಯೂತ್ಸ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷರಾಗಿ , ಶ್ರೀ ಶಿವಯೋಗೀಶ್ವರ ಭಜನಾ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ವಿವಿಎಫ್‌ಎಸ್ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯ ಬಿಜೆಪಿ ಪರಿಷತ್ ಸದಸ್ಯರಾಗಿ, ನಗರ ಬಿಜೆಪಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಅನ್ಯಾಯ, ಅಕ್ರಮಗಳ ವಿರುದ್ಧ ಸದಾ ಹೋರಾಟದ ಬದುಕನ್ನು ರೂಢಿಸಿಕೊಂಡಿರುವ ಸೋಮಣ್ಣ, ಅನೇಕ ಪ್ರತಿಭಟನೆಗಳ ಸಂದರ್ಭಗಳಲ್ಲಿ ಸೆರೆಮನೆಗೂ ಹೋಗಿ ಬಂದಿದ್ದಾರೆ. ಗೋಕಾಕ್ ವರದಿ ಜಾರಿಗಾಗಿ ನಡೆದ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ದ್ದರು. ತಮ್ಮ ಈ ಇಳಿಯ ವಯಸ್ಸಿನಲ್ಲೂ ಉತ್ಸಾಹ ದಿಂದ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ.

ನಮ್ಮ ಸುಖ-ದುಃಖಗಳಿಗೆ ನಾವೇ ಜವಾಬ್ದಾರರೇ ವಿನಃ ಮತ್ತಾರೂ ಅಲ್ಲ. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿಯೇ ಇದೆ ಎಂದು ತಮ್ಮ ಅನುಭವದ ಮಾತನ್ನು ಮೆಲುಕು ಹಾಕುವ ಸೋಮಣ್ಣ ಸೋತಾಗ ಕುಗ್ಗಲಿಲ್ಲ, ಗೆಲುವಿ ನಿಂದ ಹಿಗ್ಗಲಿಲ್ಲ. ಸಮಚಿತ್ತದಿಂದ, ಕ್ರಿಯಾಶೀಲ ವಾಗಿರುವುದೇ ಅವರ ಆರೋಗ್ಯ-ಭಾಗ್ಯದ ಗುಟ್ಟು ಎಂದರೂ ತಪ್ಪಾಗಲಾರದು. ಅವರು ನೂರ್ಕಾಲ ಸುಖ-ಶಾಂತಿಯಿಂದ ಬಾಳುವಂತಾಗಲಿ ಎಂಬುದೇ ಈ ಶುಭದಿನದ ಶುಭಾಶಯಗಳು.

-ಹನುಮಂತರಾಜ್ ಎಸ್.ಜೆ., ಶಾಮನೂರು

# ಜಪಾನ್‌ನಲ್ಲಿ ಡಾ. ಸಿ.ಎಂ. ರವಿಕುಮಾರ್ ಸಂಶೋಧನಾ ಪ್ರಬಂಧ ಮಂಡನೆ



ದಾವಣಗೆರೆ, ಮಾ.2- ಜಪಾನ್ ದೇಶದ ಕಾಗೋಶಿಮಾ ವಿಶ್ವವಿದ್ಯಾಲಯದಲ್ಲಿ ಇದೇ ದಿನಾಂಕ 5ರಿಂದ 7ರ ವರೆಗೆ ನಡೆಯುವ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಗರದ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಸಿ.ಎಂ. ರವಿಕುಮಾರ್ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಲಿದ್ದಾರೆ.

'ಪ್ಯಾಟಿಗ್ ಬಿಹೇವಿಯರ್ ಆಫ್ ರೀನ್ ಫೋರ್ಸ್ ಆ್ಯಂಡ್ ಅನ್ರಿನ್ ಫೋರ್ಸ್ ಜಿಜಿಬಿಎಸ್ ಬೇಸ್ಡ್ ಕಾಂಕ್ರೀಟ್ ಬೀಮ್ಸ್' ಎಂಬ ವಿಷಯದ ಸಂಶೋಧನಾ ಪ್ರಬಂಧವನ್ನು ಮೌಖಿಕವಾಗಿ ಪ್ರಸ್ತುತ ಪಡಿಸಲಿದ್ದಾರೆ.

ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಡಾ.ಸಿ.ಎಂ ರವಿಕುಮಾರ್ ಅವರಿಂದ ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜಿನ ಸಂಶೋಧನಾ ಶ್ರೇಷ್ಠತೆ ದ್ವಿಗುಣಗೊಂಡಿದೆ.

# ಕಬ್ಬಡ್ಡಿ ಪಂದ್ಯಾವಳಿ: ಸಚಿವರಿಂದ ಆಮಂತ್ರಣ ಪತ್ರಿಕೆ ಬಿಡುಗಡೆ



ದಾವಣಗೆರೆ, ಮಾ. 2 - ಪುಟಗನಾಳು ಗ್ರಾಮದಲ್ಲಿ ಮಾರ್ಚ್ 8 ಮತ್ತು 9 ರಂದು ಹಮ್ಮಿಕೊಂಡಿರುವ ಕಬ್ಬಡ್ಡಿ ಪಂದ್ಯಾವಳಿಯ ಆಮಂತ್ರಣ ಪತ್ರಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ತಮ್ಮ ಗೃಹ ಕಚೇರಿಯಲ್ಲಿ ಇಂದು ಬಿಡುಗಡೆ ಮಾಡಿದರು.

ಎಸ್.ಎಸ್.ಎಂ. ಅಭಿಮಾನಿ ಬಳಗ ಹಾಗೂ ಸೇವಾಲಾಲ್ ಯುವಕರ ಸಂಘ (ಪುಟಗನಾಳು) ಇವರ ಆಶ್ರಯದಲ್ಲಿ ಸಂತ ಸೇವಾ ಲಾಲ್ ಮಹಾರಾಜರ 286ನೇ ಜಯಂತೋತ್ಸವ ಅಂಗವಾಗಿ ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಶನ್ ಸಹಯೋಗದೊಂದಿಗೆ ರಾಜ್ಯ ಮಟ್ಟದ ಪುರುಷರ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಗಳು ನಡೆಯಲಿದ್ದು, ಕಬ್ಬಡಿ ಕ್ರೀಡಾ ಕೂಟವು ಯಶಸ್ವಿಯಾಗಿ ಜರುಗಲಿ ಎಂದು ಸಚಿವರು ಶುಭ ಹಾರೈಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಮಾಗಾನಹಳ್ಳಿ ಪರಶುರಾಮ್, ಬೂದಾಳ್ ಬಾಬು, ಶಶಿನಾಯ್ಕ್ ಪುಟಗನಾಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಉಜ್ಜಯಿನಿ ಪೀಠದಲ್ಲಿ ಶ್ರೀ ಗುರು ನಿವಾಸದ ಭೂಮಿ ಪೂಜೆ



ಕೊಟ್ಟೂರು, ಮಾ.2-ಇಲ್ಲಿನ ಜಗದ್ಗುರು ಮರುಳಸಿದ್ದೇಶ್ವರ ಸದ್ಧರ್ಮ ಪೀಠದಲ್ಲಿ ಗುರುವಾರ ಸಂಜೆ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಶ್ರೀ ಗುರು ನಿವಾಸದ ಭೂಮಿ ಪೂಜೆಯನ್ನು ಸಚಿವ ಬಸವರಾಜ್ ಪಾಟೀಲ್ ನೆರವೇರಿಸಿದರು.

ಈ ವೇಳೆ ಜಗದ್ಗುರು ಶ್ರೀ ಸಿದ್ದಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ, ಹೃದಯ ತಜ್ಞ ಶೈಲೇಶ್ ಪಾಟೀಲ್ ಹಾಗೂ ಗ್ರಾ.ಪಂ ಸದಸ್ಯರು, ಪದಾಧಿಕಾರಿಗಳು ಇದ್ದರು.

# ರಾಣೇಬೆನ್ನೂರಿನಲ್ಲಿ ನಾಳೆ ಎಸ್ಸೆಸ್ ಕೇರ್ ಟ್ರಸ್ಟ್‌ನಿಂದ ಉಚಿತ ಆರೋಗ್ಯ ತಪಾಸಣೆ

ರಾಣೇಬೆನ್ನೂರು, ಮಾ.2- ದಾವಣಗೆರೆ ಎಸ್.ಎಸ್. ಕೇರ್ ಟ್ರಸ್ಟ್, ರಾಣೇಬೆನ್ನೂರು ರೋಟರಿ ಹಾಗೂ ವರ್ತಕರ ಸಂಘಗಳ ಸಂಯುಕ್ತವಾಗಿ ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸೆ ಹಾಗೂ ಔಷಧಿ ವಿತರಣೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 4ರ ಮಂಗಳವಾರ ಇಲ್ಲಿನ ರೈಲ್ವೆ ಸ್ಟೇಷನ್ ರಸ್ತೆಯ ವರ್ತಕರ ಸಂಘದಲ್ಲಿ ಆಯೋಜಿಸಲಾಗಿದೆ.

ಜನರಲ್ ಮೆಡಿಸಿನ್, ಕಣ್ಣು, ಚರ್ಮರೋಗ, ಮಕ್ಕಳು, ಕೀಲು ಮೂಳೆ, ಇಎನ್‌ಟಿ, ರಕ್ತದೊತ್ತಡ, ಮೂತ್ರಪಿಂಡ ಮುಂತಾದ ವಿಭಾಗಗಳ ವೈದ್ಯರು ಪರೀಕ್ಷೆ ಹಾಗೂ ಅವಶ್ಯ ಔಷಧಿ ವಿತರಣೆ ಮಾಡುವರು ಎಂದು ರೋಟರಿಯ ಡಾ. ಬಸವರಾಜ ಕೇಲಗಾರ, ವರ್ತಕ ಜಿ.ಜಿ.ಹೊಟ್ಟಿಗೌಡ್ರ ತಿಳಿಸಿದ್ದಾರೆ.

# ಹರಪನಹಳ್ಳಿ : ಕರಿ ಬಸವೇಶ್ವರ ರಥೋತ್ಸವ



ಹರಪನಹಳ್ಳಿ, ಮಾ. 2 - ಪಟ್ಟಣದ ಕೊಟ್ಟೂರು ರಸ್ತೆ ಬಳಿ ಇರುವ ಭಾರತಿ ನಗರದ ಕರಿಬವೇಶ್ವರ ಸ್ವಾಮಿ ರಥೋತ್ಸವವು ಶನಿವಾರ ಮಧ್ಯಾಹ್ನ 12 ಗಂಟೆಗೆ ಭಕ್ತರ ಸಮ್ಮುಖದಲ್ಲಿ ನೆರವೇರಿಸಲಾಯಿತು. ಶಿವರಾತ್ರಿ ಹಬ್ಬದ ಅಂಗವಾಗಿ ಕಳೆದ ಮೂರು ದಿನಗಳಿಂದ ನೂತನ ಕರಿಬಸವೇಶ್ವರ ಕರ್ತೃಗದ್ದುಗೆಯ ನೂತನ ಶಿಲಾ ಮೂರ್ತಿಗೆ ಹೋಮ, ಹವನ ಮತ್ತು ಅಭಿಷೇಕ ಮಾಡಲಾಯಿತು. ರಥೋತ್ಸವದ ಸಂದರ್ಭದಲ್ಲಿ ಭಕ್ತರು ಬಾಳೆಹಣ್ಣು, ಉತ್ತತ್ತಿ ಎಸೆದು ತಮ್ಮ ಭಕ್ತಿ ಸಮರ್ಪಿಸಿದರು. ಕರಿಬಸವೇಶ್ವರ ಸ್ವಾಮಿಯ ಧರ್ಮಕರ್ತ ವೀರೇಶ ಆಚಾರ್ಯ ಸ್ವಾಮಿಯ ಪಟವನ್ನು ಹಾರಾಜು ಮಾಡಿದರು. ಈ ಸಂದರ್ಭದಲ್ಲಿ ಮಂಜುನಾಥ ಬಡಗೇರ ಮಾನಪ್ಪ ರವಿಚಂದ್ರ, ಶಿಲ್ಪ, ಆಚಾರ್ಯ ನಾಗರಾಜ, ಬಸವರಾಜ ಸೇರಿದಂತೆ ಅನೇಕ ಇದ್ದರೂ

# ಭದ್ರಾ ಅಚ್ಚುಕಟ್ಟನ್ನು ಸಮೀಕ್ಷೆಗೆ ಒಳಪಡಿಸಲು ತೇಜಸ್ವಿ ಪಟೇಲ್ ಮನವಿ

ದಾವಣಗೆರೆ, ಮಾ. 2- ಭದ್ರಾ ಜಲಾಶಯದಿಂದ ನೀರು ಹರಿಸಲು ಆರಂಭಿಸಿ ಸುಮಾರು 60 ವರ್ಷಗಳಲ್ಲಿ ಹಲವು ಬದಲಾವಣೆಗಳಾಗಿದ್ದು, ತಜ್ಞರ ತಂಡವೊಂದನ್ನು ರಚಿಸಿ, ಅವರು ನೀಡುವ ವರದಿ ಅನ್ವಯ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕಬ್ಬು ನಿಯಂತ್ರಣ ಮಂಡಳಿಯ ನಾಮ ನಿರ್ದೇಶಿತ ಸದಸ್ಯ ತೇಜಸ್ವಿ ವಿ. ಪಟೇಲ್ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾರೆ.

ಭದ್ರಾ ಜಲಾಶಯ ನಿರ್ಮಾಣಗೊಂಡ ಸಮಯದಲ್ಲಿ ನಿಗದಿಯಾದ ಅಚ್ಚುಕಟ್ಟು ಮತ್ತು ಬೆಳೆ ಪದ್ಧತಿ ಆಧರಿಸಿ ಬೇಸಿಗೆ ಮತ್ತು ಮಳೆಗಾಲದ ಹಂಗಾಮುಗಳಲ್ಲಿ ನಾಲೆಗಳಿಗೆ ನೀರನ್ನು ಹರಿಸುತ್ತಾ ಬರಲಾಗುತ್ತಿದೆ. ಆರು ದಶಕಗಳ ಈ ಅವಧಿಯಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು, ಬೆಳೆ ಪದ್ಧತಿ, ಅನೇಕ ಕಡೆ ಎತ್ತರದ ಪ್ರದೇಶಗಳಲ್ಲಿ ಮಣ್ಣನ್ನು ಯಂತ್ರಗಳಿಂದ ತೆಗೆದು ಸಮಗೊಳಿಸಿ ನೀರನ್ನು ಹರಿಸಿಕೊಳ್ಳುವುದರ ಮೂಲಕ ಅನಧಿಕೃತವಾಗಿ ಅಚ್ಚುಕಟ್ಟಿಗೆ ಸೇರ್ಪಡೆಯಾಗಿರುವ ಪ್ರದೇಶ, ನಾಲೆಗಳು ನಿರ್ಮಾಣಗೊಂಡ ನಂತರ 2008 ರಲ್ಲಿ ಆಧುನೀಕರಣಗೊಂಡಿದ್ದರೂ ಹಲವು ಕಡೆ ನಾಲೆಗಳಲ್ಲಿ ಅಪಾಯಕಾರಿ ಬೆಳವಣಿಗೆಗಳಾಗಿದೆ ಎಂದು ಅವರು ಅಭಿಪ್ರಾಯಿಸಿದ್ದಾರೆ.

ಇದಲ್ಲದೆ ಮುಖ್ಯ ನಾಲೆಯಿಂದ ಉಪ ನಾಲೆಗಳವರೆಗೂ ಅಕ್ರಮ ಪಂಪ್‌ಸೆಟ್ ಹಾವಳಿ ದಿನೇ ದಿನೇ ಹೆಚ್ಚುತ್ತಿದೆ. ಈ ಎಲ್ಲ ಸಂಗತಿಗಳ ಪರಿಣಾಮವಾಗಿ ಪ್ರತೀ ವರ್ಷದಿಂದ ವರ್ಷಕ್ಕೆ ನೀರು ತಲುಪದ ಬಾಧೆಗೊಳಗಾದ ಅಚ್ಚುಕಟ್ಟು ದಿನೇ ದಿನೇ ಹೆಚ್ಚುತ್ತಿದೆ. ಭದ್ರಾ ಅಚ್ಚುಕಟ್ಟಿನ ಪರಿಸ್ಥಿತಿ ಪ್ರಮಾಣದಲ್ಲಿ ಬದಲಾವಣೆಯಾಗಿದ್ದರೂ ಭದ್ರಾ ಜಲಾಶಯ ನಿರ್ಮಾಣ ಸಮಯದಲ್ಲಿ ನಿಗದಿಯಾಗಿದ್ದ ಅಚ್ಚುಕಟ್ಟು ಮತ್ತು ಬೆಳೆ ಪದ್ಧತಿ ಆಧರಿಸಿ ನೀರು ಹರಿಸುವ ಪದ್ಧತಿಯನ್ನು ಪರಿಶೀಲಿಸಬೇಕಿದೆ ಎಂದು ಅವರು ಹೇಳಿದ್ದಾರೆ.

ಹಾಗಾಗಿ ಇಂಜಿನಿಯರ್‌ಗಳು, ಕೃಷಿ, ತೋಟಗಾರಿಕಾ ತಜ್ಞರು ಹಾಗೂ ಕಂದಾಯ ಮತ್ತು ಪೊಲೀಸ್ ಅಧಿಕಾರಿಗಳನ್ನೊಳಗೊಂಡ ತಂಡವೊಂದನ್ನು ರಚಿಸಿ ಇಡೀ ಅಚ್ಚುಕಟ್ಟನ್ನು ಸಮೀಕ್ಷೆಗೆ ಒಳಪಡಿಸಿ ತಜ್ಞರು ನೀಡುವ ವರದಿಯನ್ವಯ ಅಚ್ಚುಕಟ್ಟು ಪ್ರದೇಶದಲ್ಲಿ ಅಗತ್ಯ ಕ್ರಮ. ಮಾರ್ಪಾಡುಗಳನ್ನು ಕೈಗೊಂಡಲ್ಲಿ ನಾಲೆಗಳ ಕೊನೇ ಭಾಗದ ರೈತರು ಅನುಭವಿಸುತ್ತಿರುವ ಸಂಕಷ್ಟಗಳಿಗೆ ಗಮನಾರ್ಹವಾಗಿ ಪರಿಹಾರ ಕಾಣಬಹುದೆಂಬ ವಿಶ್ವಾಸ ಹೊಂದಿದ್ದು ಭದ್ರಾ ಅಚ್ಚುಕಟ್ಟು ಸಮೀಕ್ಷೆಯ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತೇಜಸ್ವಿ ಪಟೇಲ್ ಕೋರಿದ್ದಾರೆ.

# ಹಳ್ಳಿಹಾಳ್ : 6ರಂದು ಬಸವೇಶ್ವರ ತೇರು

ಮಲೇಬೆನ್ನೂರು ಸಮೀಪದ ಹಳ್ಳಿಹಾಳ್‌ನ ಶ್ರೀ ಮುರುಡ ಬಸವೇಶ್ವರ ದೇವರ ರಥೋತ್ಸವವು ಇದೇ ದಿನಾಂಕ 6 ರ ಗುರುವಾರ ಸಂಜೆ 4 ಕ್ಕೆ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ಸಂಜೆ 6.30ಕ್ಕೆ ರಥಕ್ಕೆ ಕಂಕಣ ಧಾರಣೆ. ನಾಳೆ ಮಂಗಳವಾರ ಸಂಜೆ 6.30ಕ್ಕೆ ಎಣ್ಣೆ ಅರಿಶಿಣ ಪೂಜಾ ಕಾರ್ಯಕ್ರಮ. ದಿನಾಂಕ 5 ರ ಬುಧವಾರ ಬೆಳಗ್ಗೆ 9 ಗಂಟೆಗೆ ಉಚ್ಛಾಯ ನಡೆಯಲಿದೆ. ದಿನಾಂಕ 6 ರ ಗುರುವಾರ ಸಾಯಂಕಾಲ 4 ಗಂಟೆಗೆ ರಥೋತ್ಸವ ಜರುಗಲಿದ್ದು, ಮಾ. 7ರ ಶುಕ್ರವಾರ ಸಂಜೆ 5 ಗಂಟೆಗೆ ಓಕಳಿ ನಡೆಯಲಿದೆ.

# ಮಲೇಬೆನ್ನೂರು : ಸಂಭ್ರಮದ ಸಣ್ಣ ಉತ್ಸವ, ನಾಳೆ ರಥೋತ್ಸವ



ಮಲೇಬೆನ್ನೂರು, ಮಾ.2- ಇಲ್ಲಿನ ಶ್ರೀ ಬಸವೇಶ್ವರ ದೇವರ ರಥೋತ್ಸವದ ಅಂಗವಾಗಿ ಬಸವಣ್ಣ ದೇವರ ಸಣ್ಣ ಉತ್ಸವವು ಭಾನುವಾರ ಬೆಳಿಗ್ಗೆ ಸಂಭ್ರಮದಿಂದ ಜರುಗಿತು.

ನಾಳೆ ಸೋಮವಾರ ಬೆಳಿಗ್ಗೆ 8 ಕ್ಕೆ ಶ್ರೀ ಮಹಾಗಣಪತಿ ಪೂಜೆ, ರುದ್ರಾಭಿಷೇಕ ಪೂಜೆ ಬಳಿಕ ಸಣ್ಣ ಉತ್ಸವ ನಡೆಯಲಿದ್ದು, ರಾತ್ರಿ 9 ಗಂಟೆಗೆ ರಥಕ್ಕೆ ಕಳಸಾರೋಹಣ ಮಾಡಲಾಗುವುದು. ದಿನಾಂಕ 4 ರ ಮಂಗಳವಾರ ಬೆಳಿಗ್ಗೆ 8 ಕ್ಕೆ ರುದ್ರಾಭಿಷೇಕ ಪೂಜೆ ಬಳಿಕ ಸಣ್ಣ ಉತ್ಸವ ನಡೆಯಲಿದ್ದು, ಬೆಳಿಗ್ಗೆ 9 ಕ್ಕೆ ರಥಕ್ಕೆ ತೈಲಾಭಿಷೇಕ, ಮಧ್ಯಾಹ್ನ 12 ರಿಂದ ದಾಸೋಹ ಏರ್ಪಡಿಸಲಾಗಿದೆ. ಅದೇ ದಿನ ಸಾಯಂಕಾಲ 4.30 ಕ್ಕೆ ಶ್ರೀ ಬೀರಲಿಂಗೇಶ್ವರ ಕಾರಣಿಕೋತ್ಸವದ ನಂತರ ಶ್ರೀ ಬಸವೇಶ್ವರ ದೇವರ ಮಹಾ ರಥೋತ್ಸವವು ವೈಭವದಿಂದ ಜರುಗಲಿದೆ.

## ಐಗೂರು ಕೆ.ಎಸ್. ಬಸಮ್ಮ ನಿಧನ



ಬೆಂಗಳೂರು ಸಿಟಿ, ಗಂಗೇನಹಳ್ಳಿ, ಗಂಗಾನಗರ ಬಡಾವಣೆ ವಾಸಿ ಕೆ.ಆರ್. ಶಿವಮೂರ್ತಿ ಅವರ ಧರ್ಮಪತ್ನಿ

**ಕೆ.ಎಸ್. ಬಸಮ್ಮ**

ಇವರು ದಿನಾಂಕ : 02.03.2025ರ ಭಾನುವಾರ ಮಧ್ಯಾಹ್ನ 2.45ಕ್ಕೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಹಗೇದಿಬ್ಬ ಸರ್ಕಲ್ ಬಳಿಯ ಕುಂಬಾರ ಪೇಟೆಯ ಮೃತರ ನಿವಾಸದಲ್ಲಿ 11 ಗಂಟೆಯವರೆಗೆ ಇರಿಸಲಾಗುವುದು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03.03.2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಕೆಂಚಪ್ಪ ವಂಶಸ್ಥರು ಐಗೂರು, ಬೇತೂರು ವಂಶಸ್ಥರು ದಾವಣಗೆರೆ ಬಂಧು-ಮಿತ್ರರು. 87622 01630, 78927 24205**

## ಶ್ರೀಮತಿ ಸಾವಿತ್ರಮ್ಮ ಭೀಮದಾಸ್ ಕೋಲ್ಕುಂಟೆ ನಿಧನ



ದಾವಣಗೆರೆ ಸಿಟಿ, 117 'ಎ' ಬ್ಲಾಕ್, 8ನೇ ಕ್ರಾಸ್, ದೇವರಾಜ ಅರಸು ಬಡಾವಣೆ ವಾಸಿ ದಿ. ಭೀಮದಾಸ್ ಕೆ.ಪಿ. ಅವರ ಧರ್ಮಪತ್ನಿ

**ಶ್ರೀಮತಿ ಸಾವಿತ್ರಮ್ಮ**

ಇವರು ದಿನಾಂಕ : 01.03.2025ರ ಶನಿವಾರ ಸಂಜೆ ದೈವಾಧೀನರಾದರು. ಮೃತರಿಗೆ 91 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಮೃತರ ಸ್ವಗೃಹದಲ್ಲಿ 9 ಗಂಟೆಯ ವರೆಗೆ ಇರಿಸಲಾಗುವುದು ಅಂತ್ಯಕ್ರಿಯೆಯನ್ನು ದಿನಾಂಕ : 03.03.2025ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಮಿತ್ರರು. ಮೊ. 78920 88513, 90085 24942**

# ಸತ್ಯ ಶರಣರಿಗೆ ನಿತ್ಯವೂ ಶಿವರಾತ್ರಿ: ಲೀಲಾಜಿ

**(1ನೇ ಪುಟದಿಂದ)** ಅಧ್ಯಾತ್ಮಿಕ ಕಾರ್ಯಕ್ರಮಗಳಿಗೆ ತಮ್ಮ ಸಹಮತ ಇದೆ. ಸಂಸ್ಥೆ ಇನ್ನೂ ಉತ್ತಮ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಎತ್ತರಕ್ಕೆ ಬೆಳೆಯಲಿ ಎಂದು ಆಶಯ ವ್ಯಕ್ತಪಡಿಸಿದರು.

ಮತ್ತೋರ್ವ ಅತಿಥಿಯಾಗಿದ್ದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಪುರಾಣಗಳು, ವೇದ ಉಪನಿಷತ್ತು ಗಳು, ರಾಮಾಯಣ, ಮಹಾಭಾರತ ಇವೆಲ್ಲವೂ ಮಾನವನಿಗೆ ಸಂಕಲ್ಪದ ಸತ್ಯದ ದಾರಿಯನ್ನು ತೋರಿಸುವ ಗ್ರಂಥಗಳಾಗಿವೆ ಎಂದರು.

ಪ್ರಜಾಪಿತ ಈಶ್ವರೀಯ ವಿವಿ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಅಧ್ಯಾತ್ಮಿಕ ಕೇಂದ್ರ ಎಂದೆನಿಸಿ ಕೊಂಡಿದೆ. ವಿಶ್ವದ 150 ರಾಷ್ಟ್ರಗಳಲ್ಲಿ ತನ್ನ ಸೇವಾ ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ. ಕಲಿಯುಗ ಹೋಗಿ ಸತ್ಯ ಯುಗ ಬರುತ್ತದೆ ಎಂಬ ಆಶಾಭಾವನೆಯಿಂದ ಎಲ್ಲರೂ ಕಾಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಈಶ್ವರೀಯ ವಿವಿ ಕಾರ್ಯಗಳು ಪ್ರಶಂಸನೀಯ ಎಂದು ವಾಮದೇವಪ್ಪ ಅವರು ಮುಕ್ತಕಂಠದಿಂದ ಪ್ರಶಂಸಿಸಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹಳಿಯಾಳ ಶಾಖೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಪದ್ಮಾಜೀ ವಿಶೇಷ ಉಪನ್ಯಾಸ ನೀಡಿ, ಮೌಲ್ಯಶಿಕ್ಷಣ, ಜೀವನ ಶಿಕ್ಷಣ, ಕಲಾತ್ಮಕ ಶಿಕ್ಷಣವನ್ನು ಈಶ್ವರೀಯ ವಿವಿ ನೀಡುತ್ತಿದೆ. ಇಲ್ಲಿ ಸತ್ಯ ಜ್ಞಾನದ ಬೆಳಕು ತೋರುತ್ತದೆ ಎಂದು ತಿಳಿಸಿದರು.

ನಿರಂತರ ಶಿವನ ಸ್ಮರಣೆಗಾಗಿ ಶಿವರಾತ್ರಿ ದಿನದಂದು ಉಪವಾಸ, ಜಾಗರಣೆ, ಧ್ಯಾನ ಮಾಡುತ್ತೇವೆ. ಉಪವಾಸ ಎಂದರೆ ಹಗುರತೆ, ತ್ಯಾಗ, ಅಶುದ್ಧವಾದುದನ್ನು ಬಿಡುವುದು. ಇಂದ್ರಿಯಗಳಿಗೆ ನಿಗ್ರಹ ಬರಬೇಕು. ಹಗುರಿದ್ದಾಗ ಭಗವಂತನ ಕಡೆ ಮನಸ್ಸು ಹೋಗುತ್ತದೆ. ಕೇವಲ ದೈಹಿಕ ಉಪವಾಸ ಅಲ್ಲ. ಮಾನಸಿಕ ಉಪವಾಸ ವನ್ನೂ ಮಾಡುತ್ತೇವೆ ಎಂದು ಹೇಳಿದರು.

ಜಾಗರಣೆ ಎಂದರೆ ಜಾಗೃತರಾಗಿ ಇರುವುದು. ಕೆಲವರು ಕೆಲವು ಕಾರ್ಯಕ್ರಮಗಳನ್ನು ನೋಡಿ ಜಾಗರಣೆ ಮಾಡುತ್ತಾರೆ. ಹೆಜ್ಜೆ ಹೆಜ್ಜೆಗೂ ಜಾಗೃತರಾಗಿರಬೇಕು. ಕೆಟ್ಟ ವಿಚಾರಗಳು, ಕೆಟ್ಟ ಆಲೋಚನೆಗಳು ಬರದಿರಲೆಂದು ಧ್ಯಾನ ಮಾಡಬೇಕು. ಸತ್ಯ ಶಿವನನ್ನು ಅರಿತವರಿಗೆ ನಿತ್ಯವೂ ಉಪವಾಸ, ನಿತ್ಯವೂ ಧ್ಯಾನ, ನಿತ್ಯವೂ ಜಾಗರಣೆ ಎಂದು ಪದ್ಮಾಜಿ ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಈಶ್ವರೀಯ ವಿವಿ 89 ವರ್ಷಗಳಿಂದ ತನ್ನ ಸೇವೆಯನ್ನು ಪ್ರಪಂಚಾದ್ಯಂತ ನಿರಂತರವಾಗಿ ಸಲ್ಲಿಸುತ್ತಾ ಬರುತ್ತಿದೆ. ಆಂಜನೇಯ ಬಡಾವಣೆಯ ಗೀತ ಪಾಠಶಾಲೆಯು ಸತತ 25 ವರ್ಷಗಳ ಕಾಲ ಸೇವೆ ಸಲ್ಲಿಸುವುದರೊಂದಿಗೆ ರಜತ ಮಹೋತ್ಸವ ಆಚರಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ನಾರಿಯರ ನೇತೃತ್ವದಲ್ಲಿ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ನೈತಿಕ ಶಿಕ್ಷಣ ನೀಡುವ ಸಂಸ್ಥೆಯಾಗಿದ್ದು, ದಾವಣಗೆರೆ ಶಾಖೆ ಕೂಡ ಎಲ್ಲಾ ವರ್ಗದವರಿಗೂ ಶಿಕ್ಷಣ ನೀಡುತ್ತಿದೆ. ಹನ್ನೆರಡನೇ ಶತಮಾನದಲ್ಲಿ ಅಕ್ಕಮಹಾದೇವಿ ಮಾಡಿದ ಸೇವೆಯನ್ನು ಲೀಲಾಜಿ, ಪದ್ಮಾಜಿ ಅವರಂತಹ ಸಾವಿರಾರು ಅಕ್ಕಮಹಾದೇವಿಯವರು ಅಧ್ಯಾತ್ಮಿಕ ಸೇವೆಯನ್ನು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಲಲಿತ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ ಅಧ್ಯಕ್ಷರಾದ ಶ್ರೀಮತಿ ಇ.ಆರ್. ಶಶಿಕಲಾ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಬ್ರಹ್ಮಾಕುಮಾರೀಸ್ ಸಂಸ್ಥೆಯ ಸೇವೆಯನ್ನು ಮೆಲಕು ಹಾಕಿದರು.

ಮಹಾರಾಜ ಸೋಪ್ಸ್ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಇ. ರವಿರಾಜ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ರಾಜಯೋಗ ಶಿಕ್ಷಕರಾದ ಶ್ರೀಮತಿ ಉಮಾ ರಾಜು ಕಾರ್ಯಕ್ರಮ ನಿರೂಪಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ಆಂಜನೇಯ ಬಡಾವಣೆ ಗೀತ ಪಾಠ ಶಾಲೆಯ ರಾಜಯೋಗ ಶಿಕ್ಷಕರಾದ ಶ್ರೀಮತಿ ಸೌಭಾಗ್ಯಮ್ಮ, ಭಾಗ್ಯಲಕ್ಷ್ಮಿ ಮತ್ತಿತರರು ಅತಿಥಿ ಗಣ್ಯರನ್ನು ಸ್ವಾಗತಿಸಿ, ಬೀಳ್ಕೊಟ್ಟರು.

# ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಉತ್ತಮ ಆಡಳಿತ ಮುಖ್ಯ

## ಐಎಎಸ್ ಆಸ್ಪಿರಂಟ್ ಕ್ಲಬ್ ಉಪನ್ಯಾಸ ಕಾರ್ಯಕ್ರಮದಲ್ಲಿ ಐಜಿಪಿ ಬಿ.ಆರ್. ರವಿಕಾಂತೇಗೌಡ



ದಾವಣಗೆರೆ, ಮಾ.2- ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಫಲರಾಗಿ ಆಡಳಿತಾತ್ಮಕವಾಗಿ ಸಮಾಜದ ಬದಲಾವಣೆ ತರುವ ನಿಟ್ಟಿನಲ್ಲಿ ಸ್ವಾಸ್ಥ್ಯ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದು ಐಜಿಪಿ ಬಿ.ಆರ್. ರವಿಕಾಂತೇಗೌಡ ಕಿವಿಮಾತು ಹೇಳಿದರು.

'ದಿ ಹಿಂದೂ ಪತ್ರಿಕೆ ಗ್ರೂಪ್ ಮತ್ತು ಶಂಕರ್ ಐಎಎಸ್ ಅಕಾಡೆಮಿಯ ಸಹಯೋಗದಲ್ಲಿ ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ 'ಐಎಎಸ್ ಆಸ್ಪಿರಂಟ್ ಕ್ಲಬ್ ಅತಿಥಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಡಳಿತ ಸದೃಢ ಹಾಗೂ ಉತ್ತಮವಾಗಿದ್ದರೆ ಸಮಾಜದಲ್ಲಿ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಮತ್ತು ಉತ್ತಮ ಬದುಕು ನಿರ್ಮಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಈ ಹಿಂದೆ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸಲು ರಾಜ್ಯದಲ್ಲಿ ವ್ಯವಸ್ಥೆಗಳು ಇರಲಿಲ್ಲ. ಹಾಗಾಗಿ ಕಲಿಕೆಗಾಗಿ ದೆಹಲಿಗೆ ಹೋಗಬೇಕಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ರಾಜ್ಯದ ಯುವ ಪೀಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ತೆಗೆದುಕೊಳ್ಳಲು ರಾಜ್ಯದಲ್ಲೇ ಅನೇಕ ಐಎಎಸ್ ಅಕಾಡೆಮಿಗಳು ತಲೆ ಎತ್ತಿವೆ ಎಂದರು. ಇಂದಿನ ಯುವಕರಿಗೆ ಉತ್ತಮ ಅವಕಾಶಗಳಿವೆ. ಜ್ಞಾನಾರ್ಜನೆ ದೃಷ್ಟಿಯಿಂದ ಕಲಿಕೆಗೆ ಸಹಾಯಕವಾಗುವ ಕಲಿಕಾ ಸಾಮಗ್ರಿ ಒದಗಿಸುತ್ತವೆ. ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

'ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಉತ್ತಮ ಆಡಳಿತ ಬಹುಮುಖ್ಯ ಎಂದು ಹೇಳಿದ್ದ ನಮ್ಮ ತಂದೆಯ ಮಾತಿನಿಂದಾಗಿ ನಾನು ಪೊಲೀಸ್ ಇಲಾಖೆಗೆ ಸೇರಿ ಜನ ಸೇವೆ ಮಾಡಲು ಮುಂದಾಗಿದ್ದೇನೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಿ ಹಿಂದೂ ಗ್ರೂಪಿನ ಪ್ರಧಾನ ವ್ಯವಸ್ಥಾಪಕ ಸಿ. ಶ್ರೀಧರ್, ಹಿರಿಯ ಪತ್ರಕರ್ತ ಗಿರೀಶ್, ಶಂಕರ್ ಐಎಎಸ್ ಅಕಾಡೆಮಿ ಪ್ರಾದೇಶಿಕ ಮುಖ್ಯಸ್ಥ ಪ್ರೇಮಾನಂದ, ಪತ್ರಕರ್ತ ಆನಂದ್ ಮಾಳಗಿ, ಜಿಎಂಯು ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಟಿ.ಆರ್. ತೇಜಸ್ವಿ ಕಟ್ಟಿಮನಿ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಕೆ.ಎಸ್. ಓಂಕಾರಪ್ಪ ಇತರರು ಇದ್ದರು.

# ವಿಶೇಷಚೇತನರ ಸೌಲಭ್ಯ ಸದ್ಬಳಕೆಗೆ ಕರೆ

## ಹರಿಹರ: ಸಮನ್ವಯ ಸಭೆಯಲ್ಲಿ ನಗರಸಭಾಧ್ಯಕ್ಷೆ ಕವಿತಾ ಮಾರುತಿ



ಹರಿಹರ, ಮಾ.2- ವಿಕಲಚೇತನರು ಸರ್ಕಾರದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ತಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು ಎಂದು ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಕಿವಿಮಾತು ಹೇಳಿದರು.

ನಗರಸಭೆಯ ಸಭಾಂಗಣದಲ್ಲಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ನಡೆದ ವಿಶೇಷಚೇತನರ ಸಮನ್ವಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ವಿಕಲಚೇತನರ ಸಬಲೀಕರಣದ ದೃಷ್ಟಿಯಿಂದ ದ್ವಿಚಕ್ರ ವಾಹನ, ಸ್ವಯಂ ಉದ್ಯೋಗಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲದ ಸೌಲಭ್ಯಗಳ ಜೊತೆಗೆ ಸರ್ಕಾರ ಯಾವುದೇ ರೀತಿಯ ಯೋಜನೆಯನ್ನು ರೂಪಿಸಿದ ಸಂದರ್ಭದಲ್ಲಿ ಶೇ. 5 ರಷ್ಟು ಮೀಸಲು ನಿಗದಿಪಡಿಸಿದೆ. ಅಲ್ಲದೇ ನಗರಸಭೆ ವತಿಯಿಂದ ದ್ವಿಚಕ್ರ ವಾಹನ ವಿತರಣೆ ಮಾಡಲು ಈಗಾಗಲೇ ಅರ್ಜಿಯನ್ನು ಸ್ವೀಕರಿಸಲಾಗಿದೆ, ಆದಷ್ಟು ಶೀಘ್ರವಾಗಿ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ನಗರಸಭೆ ಉಪಾಧ್ಯಕ್ಷ ಗುತ್ತೂರು ಜಂಬಣ್ಣ ಮಾತನಾಡಿ, ವಿಕಲಚೇತನರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಮುಂದಿನ ದಿನಗಳಲ್ಲಿ ಹೀಗೆ ಆಗದಂತೆ ಎಚ್ಚರ ವಹಿಸಬೇಕು. ನಗರಸಭೆಯ ಎಲ್ಲಾ ಸದಸ್ಯರು ಯಾವತ್ತೂ ನಿಮ್ಮ ಜೊತೆಗೆ ಇರುತ್ತಾರೆ ಹಾಗಾಗಿ ಯಾರೂ ಧೃತಿಗೆಡುವುದು ಬೇಡ ಎಂದು ವಿಕಲಚೇತನರಿಗೆ ಭರವಸೆ ನೀಡಿದರು.

ವಿಕಲಚೇತನ ಇಲಾಖೆ ಅಧಿಕಾರಿ ಶಶಿಕಲಾ ಮಾತನಾಡಿ, ಡಿಸೆಂಬರ್ 3ರಂದು ವಿಶ್ವ ವಿಕಲಚೇತನರ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನಾಚರಣೆ ಉದ್ದೇಶ ಎಲ್ಲರಿಗೂ ಸಮಾನವಾಗಿ ಅವಕಾಶ ಸಿಗಬೇಕು ಎಂಬುದಾಗಿದೆ.

ಗ್ರಾ.ಪಂ ಸೇರಿದಂತೆ ಸ್ಥಳೀಯವಾಗಿ ಸಮಾನ ಅವಕಾಶ ಮತ್ತು ಸೌಲಭ್ಯಗಳ ಅರಿವು ಮೂಡಿಸಲು ಸಮನ್ವಯ ಸಭೆ ಆಯೋಜಿಸಲಾಗಿದೆ. ತಾಲ್ಲೂಕಿನಲ್ಲಿ ಸುಮಾರು 880 ವಿಕಲಚೇತನರು ಇದ್ದು, ಅವರ ಸಬಲೀಕರಣ ದೃಷ್ಟಿಯಿಂದ ಸರ್ಕಾರ ಒದಗಿಸಿರುವ ಸೌಲಭ್ಯಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ನಗರಸಭೆ ಎಇಇ ವಿನಯ್ ಕುಮಾರ್ ಹಾಜರಿದ್ದರು.

**ಅಧ್ಯಕ್ಷ-ಉಪಾಧ್ಯಕ್ಷರ ಆಕ್ರೋಶ:** ಸಭೆಯಲ್ಲಿ ಭಾಗವಹಿಸಿದ್ದ ಅಂಗವಿಕಲರಿಗೆ ಕುಡಿಯುವ ನೀರು, ಬಿಸ್ಕತ್ತು ಮತ್ತು ಚಹ ವ್ಯವಸ್ಥೆ ಮಾಡುವಂತೆ ನಗರಸಭೆ ಅಧಿಕಾರಿ ಜಗದೀಶ್ ಎಂಬುವರಿಗೆ, ಅಧ್ಯಕ್ಷೆ ಕವಿತಾ ಮಾರುತಿ ತಿಳಿಸಿದಾಗ, ಇದು ನಮ್ಮ ಕಾರ್ಯಕ್ರಮ ಆಗಿರುವುದಿಲ್ಲ ಮತ್ತು ಪೌರಾಯುಕ್ತರು ಸಭೆಗೆ ಬಂದಿಲ್ಲ ಅವರಿಗೆ ಕೇಳಿ ತರಿಸುವುದಾಗಿ ಹೇಳುತ್ತಿದ್ದಂತೆ, ಅಧ್ಯಕ್ಷೆ ಮತ್ತು ಉಪಾಧ್ಯಕ್ಷ ಜಂಬಣ್ಣ ಅಧಿಕಾರಿಯ ನಡವಳಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸಮಾರಂಭವನ್ನು ನಿಲ್ಲಿಸಿದರು. ತದನಂತರ ನೀರು, ಬಿಸ್ಕತ್ತು ಮತ್ತು ಚಹ ನೀಡಿದ ಮೇಲೆ ಪುನಃ ಸಮಾರಂಭವನ್ನು ಆರಂಭಿಸಿದ ಘಟನೆ ನಡೆಯಿತು.

**ಹಣ ಕೇಳುವ ಅಧಿಕಾರಿಗಳು:** ಹಲವಾರು ವರ್ಷಗಳಿಂದ ನಮಗೆ ಯಾವುದೇ ರೀತಿಯ ಸೌಲಭ್ಯಗಳನ್ನು ನೀಡಿರುವುದಿಲ್ಲ. ಐಡಿ ಕಾರ್ಡ್‌ಗೆ 2017ರಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಆದರೆ ಇದುವರೆಗೂ ಬಂದಿಲ್ಲ ಮತ್ತು ಸರ್ಕಾರದ ಸೌಲಭ್ಯಗಳನ್ನು ಕೇಳಲು ಕಚೇರಿಗೆ ಹೋದಾಗ ಅಧಿಕಾರಿಗಳು ಹಣವನ್ನು ಕೇಳುತ್ತಾರೆ ಎಂದು ನೀಲಪ್ಪ ಎಂಬುವರು ಅಲವತ್ತುಕೊಂಡರು.

# ಅಭಿವೃದ್ಧಿ ಹೆಸರಲ್ಲಿ ಬೋಗಸ್ ಲೆಕ್ಕ

## ಜಗಳೂರು ಪ.ಪಂ ಸಾಮಾನ್ಯ ಸಭೆಯಲ್ಲಿ ಸದಸ್ಯರಿಂದ ಆರೋಪ



ಜಗಳೂರು, ಮಾ. 2- ಪಟ್ಟಣದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗದೇ ಇದ್ದರೂ ಅಭಿವೃದ್ಧಿ ಹೆಸರಿನಲ್ಲಿ ಬೋಗಸ್ ಬಿಲ್ ಲೆಕ್ಕ ತೋರಿಸಲಾಗಿದ್ದು, ವ್ಯಾಪಕ ಅವ್ಯವಹಾರವಾಗಿದೆ ಎಂದು ಪ.ಪಂ ಮುಖ್ಯಾಧಿಕಾರಿ ಹಾಗೂ ಪ.ಪಂ ಅಧ್ಯಕ್ಷರ ವಿರುದ್ಧ ಪಕ್ಷಭೇದ ಮರೆತು ಸರ್ವಸದಸ್ಯರುಗಳು ಆರೋಪಿಸಿದರು.

ಗುರುವಾರ ಪಟ್ಟಣದ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಪ.ಪಂ ಅಧ್ಯಕ್ಷ ನವೀನ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆಡಳಿತ ವ್ಯವಸ್ಥೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣ ಪಂಚಾಯಿತಿಗೆ ಆಸ್ತಿ ತೆರಿಗೆ, ನೀರಿನ ಕಂದಾಯ, ಮಳಿಗೆ ತೆರಿಗೆ, ಹರಾಜುದಾರರಿಂದ ಬರುವ ಆದಾಯ, ಫ್ಲೆಕ್ಸ್ ಅಳವಡಿಕೆಗಳ ವಸೂಲಿ, ಸೇರಿದಂತೆ ವಿವಿಧ ಮೂಲಗಳಿಂದ ಬರುವ ಸಮಗ್ರ ಆದಾಯದ ಲೆಕ್ಕವಿಲ್ಲ, ಹೊರಗುತ್ತಿಗೆ ನೌಕರರ ವೇತನ, ಸಕ್ಕಿಂಗ್ ಮಷಿನ್ ರಿಪೇರಿ, ಡೀಸೆಲ್ ಬಿಲ್ ಇತರೆ ಖರ್ಚುಗಳನ್ನು ಮಾತ್ರ ಪುಸ್ತಕದಲ್ಲಿ ತೋರಿಸಲಾಗಿದೆ.

ಪ್ಲಾಸ್ಟಿಕ್ ಬಳಕೆಗೆ ದಂಡ ವಸೂಲಿ ಲೆಕ್ಕವೇ ಇಲ್ಲ. ಚರಂಡಿ ಸ್ವಚ್ಛತೆ, ಬ್ಲೀಚಿಂಗ್ ಪೌಡರ್ ಸಿಂಪರಣೆ, ಬೀದಿ ದೀಪ ಸಮರ್ಪಕ ನಿರ್ವಹಣೆ ಎಲ್ಲವೂ ಕಣ್ಮರೆಯಾಗಿವೆ ಎಂದು ಸದಸ್ಯರು ಪಕ್ಷಾತೀತವಾಗಿ ಧ್ವನಿಗೂಡಿಸಿದರು.

**ಆರೋಗ್ಯ ನಿರೀಕ್ಷಕರ ನಿರ್ಲಕ್ಷ್ಯ:** ಪಟ್ಟಣದ ವಾರ್ಡ್ ಗಳಲ್ಲಿ ಸ್ವಚ್ಛತೆಯಿಲ್ಲ. ತೆರಿಗೆ ಹಣ ವ್ಯಯ ಮಾಡಿ ವಾಹನಗಳ ಡೀಸೆಲ್ ಲಕ್ಷಗಟ್ಟಲೇ ಲೆಕ್ಕ ಬರೆದಿರುವಿರಿ. ಆರೋಗ್ಯ ನಿರೀಕ್ಷಕರ ನಿರ್ಲಕ್ಷ್ಯದಿಂದ ಸ್ವಚ್ಛತೆಯಿಲ್ಲದಂತಾಗಿದೆ. ಸಾರ್ವಜನಿಕರಿಗೆ, ಸದಸ್ಯರಿಗೆ ಸ್ಪಂದಿಸದೇ ಮನಬಂದಂತೆ ಅಧಿಕಾರಿಗಳ ವರ್ತನೆ ಸರಿಯಲ್ಲ ಎಂದು ಸದಸ್ಯರಾದ ಆರ್.ತಿಪ್ಪೇಸ್ವಾಮಿ, ರೇವಣ್ಣ, ರಮೇಶ್ ರೆಡ್ಡಿ, ಮಂಜಮ್ಮ ಲಲಿತಮ್ಮ ತರಾಟೆ ತೆಗೆದುಕೊಂಡರು.

**ಕೆಲಸ ನೀಡಲು ಜಾತಿ ತಾರತಮ್ಯ:** ತಳಸಮುದಾಯದ ಹೊರಗುತ್ತಿಗೆ ನೌಕರರನ್ನು ಕಸಗುಡಿಸಲು ನಿಯೋಜಿಸಿ ಮೇಲ್ವರ್ಗದ ಜಾತಿ ನೌಕರರನ್ನು ಕಛೇರಿ ಕೆಲಸಗಳಿಗೆ ನಿಯೋಜನೆ ಮಾಡಿರುವುದು ಜಾತಿ ತಾರತಮ್ಯಕ್ಕೆ ಸಾಕ್ಷಿಯಾಗಿದೆ ಎಂದು ಮುಖ್ಯಾಧಿಕಾರಿ ವಿರುದ್ಧ ಸದಸ್ಯ ದೇವರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣ ಪಂಚಾಯಿತಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಆದಾಯಕ್ಕಿಂತ ಖರ್ಚು ಹೆಚ್ಚಾಗಿದೆ ಎಂದು ಮುಖ್ಯಾಧಿಕಾರಿ ಆಡಳಿತ ವೈಖರಿ ಬಗ್ಗೆ ಬಹುತೇಕ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಲೋಕಮ್ಮ, ಸದಸ್ಯರಾದ ಆರ್.ತಿಪ್ಪೇಸ್ವಾಮಿ, ಪಾಪಲಿಂಗಪ್ಪ, ಶಕೀಲ್ ಅಹಮ್ಮದ್, ಸರೋಜಮ್ಮ, ಮಹಮ್ಮದ್ ಅಲಿ, ನಿರ್ಮಲಕುಮಾರಿ, ಲುಕ್ಮಾನ್ ಖಾನ್, ವಿಶಾಲಾಕ್ಷಿ, ಆದರ್ಶ, ನಾಮನಿರ್ದೇಶಿತ ಸದಸ್ಯರಾದ ಶಾಂತಪ್ಪ, ಜಯ್ಯಣ್ಣ, ತಾನಾಜಿ ಗೋಸಾಯಿ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಭಾಗವಹಿಸಿದ್ದರು.

## ಬೀದಿ ನಾಟಕ ಕಲಾತಂಡಗಳಿಂದ ಅರ್ಜಿ ಆಹ್ವಾನ

ದಾವಣಗೆರೆ ಮಾ.2- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮದಡಿಯಲ್ಲಿ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಜಾನಪದ ಕಲಾ ಪ್ರಕಾರದಲ್ಲಿ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲು ಕಲಾ ಪ್ರದರ್ಶನ ನೀಡಲು ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 7 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ವಿವರಕ್ಕೆ ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣ ಕಚೇರಿ ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಶಿವರಾತ್ರಿ ಜಾಗರಣೆ

ಲೇಬರ್ ಕಾಲೋನಿ 6ನೇ ತಿರುವಿನಲ್ಲಿರುವ (ಕೆಎಸ್ಆರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ) ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ 57ನೇ ವರ್ಷದ ಶಿವರಾತ್ರಿ ಜಾಗರಣೆ ಮಹೋತ್ಸವ ನಡೆಯಲಿದೆ. ಇಂದು 8 ಗಂಟೆಗೆ ಸ್ವಾಮಿಗೆ ಪೂಜೆ ಪಳಾರ ಹಾಕಿಸುವುದು. 4ರಂದು ಸಂಜೆ ಪೂಜೆ ನಡೆಯಲಿದ್ದು, ನಂತರ ಪಳಾರ ವಿತರಣೆ ನಡೆಯಲಿದೆ.

## ಕುರುವತ್ತಿ ಪಾದಯಾತ್ರಿಗಳಿಗೆ ಅಕ್ಕಿ ವರ್ತಕರಿಂದ ಹಣ್ಣು ವಿತರಣೆ



ದಾವಣಗೆರೆ, ಮಾ. 2- ನಗರದ ಚೌಕಿಪೇಟೆ ಅಕ್ಕಿ ವರ್ತಕರ ಸಂಘದ ಅಧ್ಯಕ್ಷ ಎಂ.ವಿ. ಜಯಪ್ರಕಾಶ್ ಮಾಗಿ ಅವರ ಸ್ನೇಹ ಬಳಗದಿಂದ ಶ್ರೀ ಕುರುವತ್ತಿ ಬಸವೇಶ್ವರ ರಥೋತ್ಸವಕ್ಕೆ ಪಾದಯಾತ್ರೆ ಹೋಗುವ ಭಕ್ತಾದಿಗಳಿಗೆ ಕೊಂಡಜ್ಜಿಯಲ್ಲಿ 11ನೇ ವರ್ಷದ ಪ್ರಸಾದ ಮತ್ತು ಹಣ್ಣು, ನೀರು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಯಪ್ರಕಾಶ್ ಮಾಗಿ ಹಾಗೂ ಚೌಕಿಪೇಟೆ ಅಕ್ಕಿ ವರ್ತಕರು ಹಾಗೂ ಗುಜರಿ ಲೈನ್ ಅಕ್ಕಿ ನುಚ್ಚು ವರ್ತಕರು ಹಾಗೂ ರೈಸ್ ಬ್ರೋಕರ್‌ಗಳು ಮತ್ತು ಸ್ನೇಹ ಬಳಗದವರು ಉಪಸ್ಥಿತರಿದ್ದರು.

## ಕಲಾಕುಂಚದಿಂದ ಆಜೀವ ಸದಸ್ಯತ್ವ ಅಭಿಯಾನ

ದಾವಣಗೆರೆ, ಮಾ.2- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಜೀವ ಸದಸ್ಯತ್ವ ಅಭಿಯಾನ ಪ್ರಾರಂಭವಾಗಿದ್ದು, ಸದಸ್ಯತ್ವ ಪಡೆಯಲು ಇಚ್ಛಿಸುವವರು 9538732777 ಈ ವ್ಯಾಟ್ಸ್‌ಆ್ಯಪ್ ಸಂಖ್ಯೆಗೆ ಸಂಪರ್ಕಿಸಿ.

# ಎತ್ತಿನ ಪ್ರಾಣ ಉಳಿಸಿ, ಮಾನವೀಯತೆ ಮೆರೆದ ಪೊಲೀಸ್ ಸಿಬ್ಬಂದಿ

ಹೊಳಲು, ಮಾ. 2- ಸುಕ್ಷೇತ್ರ ಕುರುವತ್ತಿ ಬಸವೇಶ್ವರ ಜಾತ್ರೆಗೆಂದು ದೂರದ ಹಾವೇರಿ ಜಿಲ್ಲೆಯಿಂದ ಬಂಡಿ ಹೂಡಿಕೊಂಡು ಬಂದಿದ್ದ ಒಂದು ಎತ್ತು ಗುರುವಾರ ತಡರಾತ್ರಿ ಕುರುವತ್ತಿ ಸಮೀಪಿಸುತ್ತಿದ್ದ ಹಾಗೆ ಅಸ್ವಸ್ಥಗೊಂಡು ಇದ್ದಕ್ಕಿದ್ದ ಹಾಗೆ ಮಲಗಿ ಬಿಟ್ಟಿದೆ. ಈ ಸಮಯದಲ್ಲಿ ಕುಟುಂಬಸ್ಥರು ಭಯ ಭೀತರಾಗಿ ಎತ್ತನ್ನು ಎಬ್ಬಿಸುವ ಕೆಲಸ ಮಾಡಿದ್ದಾರೆ.

ಎತ್ತು ತೀವ್ರವಾಗಿ ಅಸ್ವಸ್ಥಗೊಂಡಿದ್ದರಿಂದ ಏಳಲಾಗದೇ ಸಾವು ಬದುಕಿನ ಮಧ್ಯೆ ಹೋರಾಡುತ್ತಿತ್ತು. ಈ ವೇಳೆ ಜಾತ್ರೆಯ ಕರ್ತವ್ಯದಲ್ಲಿದ್ದ ಹೂವಿನಹಡಗಲಿ ಪೊಲೀಸ್ ಠಾಣೆಯ ಸಿಬ್ಬಂದಿ ನದಾಫ್ ಅವರು ಕುಟುಂಬಸ್ಥರನ್ನು ಸಮಾಧಾನಪಡಿಸಿ, ಕೂಡಲೇ ಎತ್ತನ್ನು ಟಾಟಾ ಎಸ್ ಗಾಡಿಯಲ್ಲಿ ಹೊಳಲು ಪಶು ವೈದ್ಯ ಆಸ್ಪತ್ರೆಗೆ ಕರೆತಂದು ವೈದ್ಯರಿಗೆ ಕರೆ ಮಾಡಿದ್ದಾರೆ.

ಈ ಸಮಯದಲ್ಲಿ ಹೊಳಲು ಗ್ರಾಮದಲ್ಲಿದ್ದ ಪಶುವೈದ್ಯ ನಿರೀಕ್ಷಕ ಡಾ. ರಾಜಕುಮಾರ್ ಅವರು ಹೂವಿನಹಡಗಲಿ ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ನಾರಾಯಣ ಬಣಕಾರ್ ಅವರ ಆದೇಶದ ಮೇರೆಗೆ ಸಕಾಲಕ್ಕೆ ಬಂದು ಚಿಕಿತ್ಸೆ ನೀಡಿದ್ದರಿಂದ ಎತ್ತು ಬದುಕುಳಿಯಲು ಸಾಧ್ಯವಾಗಿದೆ.

ಪೇದೆ ತೊಂದರೆಗೆ ಸಿಲುಕಿದ ಎತ್ತನ್ನು ಸಕಾಲಕ್ಕೆ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿ ಪ್ರಾಣ ಉಳಿಸಿ ಮಾನವೀಯಯತೆ ಮೆರೆದಿದ್ದಾರೆ.

# ಮಾತೃಭಾಷಾ ಶಿಕ್ಷಣ ಲಭ್ಯವಿಲ್ಲ

**(1ನೇ ಪುಟದಿಂದ)** ಈ ಸಮಸ್ಯೆ ನಿವಾರಣೆಗಾಗಿ ಬಹು ಭಾಷಾ ಶಿಕ್ಷಣ ನೀತಿ ರೂಪಿಸಬೇಕಿದೆ. ಎಲ್ಲಾ ವಿದ್ಯಾರ್ಥಿಗಳಿಗೆ ಲಾಭ ತರುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆ ರೂಪಿಸಬೇಕಿದೆ ಎಂದು ವರದಿ ಹೇಳಿದೆ.

ಐತಿಹಾಸಿಕ ಹಾಗೂ ಸಮಕಾಲೀನ ಅಂಶಗಳಿಂದಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ವೈವಿಧ್ಯಮಯ ಭಾಷೆಗಳ ಸವಾಲು ಎದುರಾಗಿದೆ. ವಸಾಹತುಶಾಹಿ ಕಾಲದ ಶಿಕ್ಷಣ ಪದ್ಧತಿಯಿಂದ ಕೆಲವೆಡೆ ಮಕ್ಕಳಿಗೆ ಮಾತೃಭಾಷೆ ಶಿಕ್ಷಣ ದೊರೆಯುತ್ತಿಲ್ಲ. ಇನ್ನು ಕೆಲ ದೇಶಗಳಲ್ಲಿ ದೊಡ್ಡ ಪ್ರಮಾಣದ ಭಾಷಾ ವೈವಿಧ್ಯತೆ ಇದೆ. ಇದು ಶಿಕ್ಷಣ ವ್ಯವಸ್ಥೆಗೆ ಸವಾಲಾಗಿದೆ. ಹಲವು ಭಾಷೆಗಳಲ್ಲಿ ಕಲಿಕೆಗೆ ವ್ಯವಸ್ಥೆ ಮಾಡಲು ಅಗತ್ಯ ಸಂಪನ್ಮೂಲಗಳ ಲಭ್ಯತೆ ಇಲ್ಲ ಎಂದು ವರದಿ ತಿಳಿಸಿದೆ.

ವಲಸೆಯ ಕಾರಣದಿಂದಾಗಿ ಶ್ರೀಮಂತ ದೇಶಗಳಲ್ಲಿ ವೈವಿಧ್ಯತೆ ಹೆಚ್ಚಾಗುತ್ತಿದೆ. ಇದು ಆ ದೇಶಗಳಲ್ಲಿ ಮಾತೃಭಾಷಾ ಕಲಿಕೆಗೆ ತೊಡಕು ತರುತ್ತಿದೆ ಎಂದು ವರದಿ ಹೇಳಿದೆ.

# ಕಾಯ್ದೆ-ನಿಯಮಗಳ ತಿದ್ದುಪಡಿ

**(1ನೇ ಪುಟದಿಂದ)** ಪ್ರಸಕ್ತ ಸಾಲಿನವರೆಗೆ ಋಣಭಾರ ಪ್ರಮಾಣ ಪತ್ರ, ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಶೀದಿ, ಮಾಲೀಕರ ಫೋಟೋ ಮತ್ತು ಸ್ವತ್ತಿನ ಫೋಟೋ, ಮಾಲೀಕರ ಗುರುತಿನ ದಾಖಲೆ ಪ್ರತಿಗಳನ್ನು ಸಲ್ಲಿಸಬೇಕು. ಅನಧಿಕೃತ ಸ್ವತ್ತುಗಳಿಗೆ ಇ-ಖಾತಾ ಪಡೆಯಲು ಫೆಬ್ರವರಿ 11 ರಿಂದ 3 ತಿಂಗಳ ಅವಧಿ.

**ಇ-ಖಾತಾ ಪಡೆಯಲು ಅವಕಾಶವಿಲ್ಲದಿರುವ ಸ್ವತ್ತುಗಳು :** ಸರ್ಕಾರಿ ಜಾಗದಲ್ಲಿರುವ ಸ್ವತ್ತುಗಳು, ಸರ್ಕಾರದ ನಿಗಮ, ಮಂಡಳಿಗಳ ಜಾಗಗಳು, ನಗರ ಸ್ಥಳೀಯ ಸಂಸ್ಥೆಗಳ ಜಾಗದಲ್ಲಿನ ಸ್ವತ್ತುಗಳು.

ಹೆಚ್ಚಿನ ಮಾಹಿತಿಗಾಗಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಆಯಾ ಸ್ಥಳೀಯ ಸಂಸ್ಥೆಗಳ ಕಚೇರಿಯ ನೋಟೀಸ್‌ನಲ್ಲಿ ಸಹಾಯವಾಣಿ ಸಂಖ್ಯೆ ಮತ್ತು ಅರ್ಜಿ ಸ್ವೀಕರಿಸಲು ನೇಮಿಸಿದ ಸಿಬ್ಬಂದಿಯ ಹೆಸರನ್ನು ನಮೂದಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದ್ದಾರೆ.

# ಹಕ್ಕಿ ಜ್ವರಕ್ಕೆ ತುತ್ತಾದ ನಾಟಿ ಕೋಳಿಗೆ ಪರಿಹಾರ ನೀಡುವಂತೆ ಸರ್ಕಾರಕ್ಕೆ ಒತ್ತಾಯ

ದಾವಣಗೆರೆ, ಮಾ.2- ಹಕ್ಕಿ ಜ್ವರ ಬಾಧೆಯಿಂದ ಸತ್ತ, ಕನಿಷ್ಠ 1 ಕೆ.ಜಿ ಇರುವ ನಾಟಿ ಕೋಳಿಗೆ 600 ರೂ.ಗಳ ಪರಿಹಾರ ನೀಡುವಂತೆ ಜಿಲ್ಲಾ ಬಿಜೆಪಿ ವಕ್ತಾರ ಕೊಳೇನಹಳ್ಳಿ ಬಿ.ಎಂ. ಸತೀಶ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಈ ವೇಳೆ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ವಾರ ಹಕ್ಕಿ ಜ್ವರದಿಂದಾಗಿ ಸಾವಿರಾರು ಕೋಳಿಗಳು ಸಾವಿಗೀಡಾಗಿವೆ. ತಕ್ಷಣಕ್ಕೆ ಎಚ್ಚೆತ್ತುಕೊಳ್ಳದ ರಾಜ್ಯ ಸರ್ಕಾರ ಒಂದು ನಾಟಿ ಕೋಳಿಗೆ 90 ರೂ.ಗಳ ಪರಿಹಾರ ಘೋಷಣೆ ಮಾಡಿದೆ. ಇದು ಅತ್ಯಲ್ಪವಾಗಿ ಎಂದಿದ್ದಾರೆ.

ಹಳ್ಳಿಗಳಲ್ಲಿ ಸಾಕಿರುವ ನಾಟಿ ಕೋಳಿಗಳನ್ನು ತೂಕದ ಲೆಕ್ಕದಲ್ಲಿ ಮಾರಾಟ ಮಾಡುತ್ತಾರೆ. ಪ್ರಸ್ತುತ 1 ಕೆ.ಜಿ ಕೋಳಿಗೆ 600 ರೂ.ಗಳಷ್ಟಿದೆ. ಮೂರ್ನಾಲ್ಕು ಕೆ.ಜಿ ತೂಕದ ಕೋಳಿ 2 ಸಾವಿರದಿಂದ 3 ಸಾವಿರಕ್ಕೆ ಮಾರಾಟವಾಗುತ್ತವೆ.

ವಸ್ತುಸ್ಥಿತಿ ಹೀಗಿರುವಾಗ ರಾಜ್ಯ ಸರ್ಕಾರ 1 ಕೋಳಿಗೆ 90 ರೂ.ಗಳ ಪರಿಹಾರ ನಿಗದಿ ಮಾಡಿರುವುದು ಕೋಳಿ ಸಾಕಾಣಿಕೆದಾರರ ವಿರೋಧಿ ನಿಲುವಾಗಿದೆ ಎಂದು ದೂರಿದ್ದಾರೆ.

ಹಳ್ಳಿಗಳಲ್ಲಿ ರೈತರು, ಬಡವರು, ಕೃಷಿ ಕೂಲಿಗಾರರು ತಮ್ಮ ಕೌಟುಂಬಿಕ ದೈನಂದಿನ ಖರ್ಚಿಗಾಗಿ ನಾಟಿ ಕೋಳಿ ಸಾಕುತ್ತಿದ್ದಾರೆ. ಹಕ್ಕಿ ಜ್ವರದ ಬಾಧೆಯಿಂದ ನಾಟಿ ಕೋಳಿ ಸಾಕಾಣಿಕೆದಾರರು ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರ ಒಂದು ಕೆ.ಜಿ ತೂಕದ ನಾಟಿ ಕೋಳಿಗೆ 600 ರೂ.ಗಳ ಪರಿಹಾರ ನೀಡಿದರೆ, ಕೋಳಿ ಸಾಕಾಣಿಕೆದಾರರ ಸಂಕಷ್ಟಕ್ಕೆ ಸ್ಪಂದಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

ತಕ್ಷಣವೇ ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಕ್ಕಿ ಜ್ವರದಿಂದ ಬಳಲುತ್ತಿರುವ ಕೋಳಿಗಳ ಮಾದರಿಗಳನ್ನು ಭೋಪಾಲ್‌ನ 'ರಾಷ್ಟ್ರೀಯ ಉನ್ನತ ಭದ್ರತಾ ಪ್ರಾಣಿ ರೋಗಗಳ ಸಂಸ್ಥೆಗೆ' ರವಾನಿಸಿ ಪರೀಕ್ಷೆಗೊಳಪಡಿಸಬೇಕು. ರೋಗ ನಿಯಂತ್ರಣಕ್ಕೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ಬೆಳಕು ಆಧರಿತ ಲಕ್ಷಾಂತರ ಚಿಪ್ ರೂಪಿಸಿದ ಕ್ವಾಂಟಮ್ ಕಂಪನಿ

ವಾಷಿಂಗ್ಟನ್, ಮಾ. 2 – ಕ್ವಾಂಟಮ್ ಚಿಪ್‌ಗಳು ಹೆಚ್ಚು ಉಪಯುಕ್ತವಾಗುವ ದಿಸೆಯಲ್ಲಿ ಮುನ್ನಡೆ ಕಂಡಿರುವುದಾಗಿ ಹೇಳಿರುವ ಅಮೆರಿಕದ ಕ್ವಾಂಟಮ್ ಕಂಪ್ಯೂಟರ್ ನವೋದ್ಯಮವಾದ ಸೈಕ್ವಾಂಟಮ್, ಬೆಳಕು ಆಧರಿತ ಲಕ್ಷಾಂತರ ಚಿಪ್‌ಗಳನ್ನು ಉತ್ಪಾದಿಸಿರುವುದಾಗಿ ತಿಳಿಸಿದೆ.

2021 ರಲ್ಲಿ ಸ್ಥಾಪನೆಯಾದ ಈ ಕಂಪನಿಯು ಫೋಟೋನಿಕ್ ಎಂಬ ಕ್ವಾಂಟಮ್ ಕಂಪ್ಯೂಟರ್ ಬಳಸುತ್ತದೆ. ಈ ರೀತಿಯ ತಂತ್ರಜ್ಞಾನ ಕಾರ್ಯಸಾಧುವಲ್ಲ ಎಂದು ಬಹಳ ದಿನಗಳಿಂದ ಹೇಳಲಾಗುತ್ತಿತ್ತು.

ಬೆಳಕಿನ ಕಣಗಳನ್ನು ಬಳಸಿ ಡಾಟಾ ಕೋಡಿಂಗ್ ಮಾಡುವ ಮೂಲಕ ಇಂತಹ ಕಂಪ್ಯೂಟರ್‌ಗಳನ್ನು ನಿರ್ವಹಿಸಲಾಗುತ್ತದೆ. ಇಂತಹ ಕಂಪ್ಯೂಟರ್‌ಗಳು ಮಾಡುವ ಸದ್ದು ಕಡಿಮೆ, ವೇಗವಾಗಿ ಕಾರ್ಯ ನಿರ್ವಹಿಸುತ್ತವೆ ಹಾಗೂ ಈಗಿರುವ ಫೈಬರ್ ಆಪ್ಟಿಕ್ ಜಾಲದ ಜೊತೆಗೆ ಕಾರ್ಯನಿರ್ವಹಿಸುತ್ತವೆ.

ಆದರೆ ಇಂತಹ ಕಂಪ್ಯೂಟರ್‌ಗಳನ್ನು ನಿರ್ವಹಿಸಲು ಹೆಚ್ಚಿನ ಮಟ್ಟದ ಹಾರ್ಡ್‌ವೇರ್ ಅಗತ್ಯವಿರುತ್ತದೆ. ಅತಿ ವೇಗವಾಗಿ ಸಾಗುವ ಫೋಟೋನ್‌ಗಳು ಕಣ್ಮರೆಯಾದರೆ ಅವುಗಳನ್ನು ಮರುರೂಪಿಸುವುದು ಕಠಿಣವಾಗಿದೆ.

ಇಂತಹ ಕಂಪ್ಯೂಟರ್ ವ್ಯವಸ್ಥೆಯಲ್ಲಿನ ಹಲವಾರು ಸಮಸ್ಯೆಗಳನ್ನು ಬಗೆಹರಿಸಿರುವುದಾಗಿ ಸೈಕ್ವಾಂಟಮ್ ತಿಳಿಸಿದೆ. ಈ ಬಗ್ಗೆ 'ನೇಚರ್' ನಿಯತಕಾಲಿಕದಲ್ಲಿ ಲೇಖನವೊಂದನ್ನು ಪ್ರಕಟಿಸಲಾಗಿದೆ.

ಬೆಳಕು ಆಧರಿತವಾದ ಕಂಪ್ಯೂಟರ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ ಮೂಲಕ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಲೇಖನದಲ್ಲಿ ತಿಳಿಸಲಾಗಿದೆ.

ಕ್ವಾಂಟಮ್ ಕಂಪ್ಯೂಟರ್‌ಗಳೂ ಸಹ ಸಾಮಾನ್ಯ ಕಂಪ್ಯೂಟರ್ ರೀತಿಯ ಸೂತ್ರ ಬಳಸಿ ಕಾರ್ಯನಿರ್ವಹಿಸುತ್ತವೆ. ಆದರೆ, ಸಾಮಾನ್ಯ ಕಂಪ್ಯೂಟರ್‌ಗಳಲ್ಲಿ ಬಿಟ್ಸ್ ಮೂಲಕ ಮಾಹಿತಿ ನಿರ್ವಹಿಸಲಾಗುತ್ತದೆ. ಕ್ವಾಂಟಮ್ ಕಂಪ್ಯೂಟರ್‌ಗಳಲ್ಲಿ ಕ್ವಾಂಟಮ್ ಬಿಟ್ಸ್ ಮೂಲಕ ನಿರ್ವಹಣೆ ಮಾಡಲಾಗುತ್ತದೆ.

ಕ್ವಾಂಟಮ್ ಕಂಪ್ಯೂಟರ್‌ಗಳನ್ನು ಶೂನ್ಯ ತಾಪಮಾನದ ಹಂತದಲ್ಲಿ ನಿರ್ವಹಿಸಬೇಕಾಗುತ್ತದೆ. ಗೂಗಲ್, ಐಬಿಎಮ್ ಹಾಗೂ ರಿಗೆಟ್ಟಿ ರೀತಿಯ ಕಂಪನಿಗಳು ಈ ದಿಸೆಯಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತಿವೆ.

ಕೆಲ ಮಾದರಿಯ ಕ್ವಾಂಟಮ್ ಕಂಪ್ಯೂಟರ್‌ಗಳು ಅತ್ಯಂತ ದುಬಾರಿ ಬೆಲೆಗೆ ಮಾರಾಟಕ್ಕೆ ಲಭ್ಯವಿವೆ. ಕೆಲವನ್ನು ಕ್ಲೌಡ್ ಮೂಲಕ ನಿರ್ವಹಿಸಬಹುದು. ಆದರೆ ಸದ್ಯಕ್ಕೆ ಈ ಕಂಪ್ಯೂಟರ್‌ಗಳು ಪ್ರಾಯೋಗಿಕ ಹಂತದಲ್ಲಿವೆ.

ಕ್ವಾಂಟಮ್ ಕಂಪ್ಯೂಟರ್‌ಗಳಲ್ಲಿ ಲೋಪಗಳ ಪ್ರಮಾಣ ಹೆಚ್ಚಾಗುವುದು ಮತ್ತೊಂದು ಸಮಸ್ಯೆಗೆ ಕಾರಣವಾಗಿದೆ. ಸೈಕ್ವಾಂಟಮ್ ರೂಪಿಸಿರುವ ಹೊಸ ತಂತ್ರಜ್ಞಾನದಲ್ಲಿ ಒಂದು ಕ್ಯೂಬಿಕ್ ಕಾರ್ಯಾಚರಣೆಯಲ್ಲಿ ಲೋಪದ ಪ್ರಮಾಣ 0.2ರಷ್ಟಿದೆ. ಎರಡು ಕ್ಯೂಬಿಕ್ ಕಾರ್ಯಾಚರಣೆಯಲ್ಲಿ 0.8ರಷ್ಟಿದೆ ಎಂದು ತಿಳಿಸಲಾಗಿದೆ. ಪ್ರಸಕ್ತ ಸ್ಮಾರ್ಟ್‌ಫೋನ್‌ಗಳಲ್ಲಿ ಬಳಕೆಯಾಗುವ ಚಿಪ್‌ಗಳಲ್ಲಿ ಲೋಪದ ಪ್ರಮಾಣ ಶೂನ್ಯದಷ್ಟಿದೆ. ಹೀಗಾಗಿ ಕ್ವಾಂಟಮ್ ಕಂಪ್ಯೂಟರ್‌ಗಳಲ್ಲಿ ಕಂಡುಬರುವ ಲೋಪಗಳು ದೊಡ್ಡ ಪ್ರಮಾಣದಲ್ಲಿ ಸಮಸ್ಯೆ ತರುತ್ತವೆ.

ಸೈಕ್ವಾಂಟಮ್ ವ್ಯವಸ್ಥೆಯಲ್ಲಿ ಫ್ಯೂಷನ್ ಆಧಾರಿತ ಕ್ವಾಂಟಮ್ ಕಂಪ್ಯೂಟರ್ ರುಪಿಸಲಾಗಿದೆ. ಇದು ಸುಲಭವಾಗಿ ಲೋಪಗಳನ್ನು ಸರಿಪಡಿಸುತ್ತದೆ ಎಂದು ತಿಳಿಸಲಾಗಿದೆ. ಸೈಕ್ವಾಂಟಮ್ ವ್ಯವಸ್ಥೆಯನ್ನು ಈಗ ಸಣ್ಣ ಪ್ರಮಾಣದಲ್ಲಿ ಮಾತ್ರ ಪ್ರಯೋಗಕ್ಕೆ ಒಳಪಡಿಸಲಾಗಿದೆ. ವಾಸ್ತವಿಕ ಕಾರ್ಯಾಚರಣೆಯಲ್ಲಿ ಲಕ್ಷಾಂತರ ಕ್ಯೂಬಿಟ್ ಬಳಕೆ ಆಗಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಲೋಪಗಳನ್ನು ತಪ್ಪಿಸುವುದು ಅಸಾಧ್ಯವಾಗಿದೆ.

ಗ್ಲೋಬಲ್ ಪೌಂಡ್ರಿಸ್ ಕಂಪನಿಯ ಜೊತೆಗೂಡಿ ಕ್ವಾಂಟಮ್ ಚಿಪ್‌ಗಳನ್ನು ಉತ್ಪಾದಿಸಿರುವುದಾಗಿ ಸೈಕಂಪ್ಯೂಟರ್ ತಿಳಿಸಿದೆ. ಗ್ಲೋಬಲ್ ಪೌಂಡ್ರೀಸ್ ಈಗಾಗಲೇ ಲಕ್ಷಾಂತರ ಚಿಪ್‌ಗಳನ್ನು ಉತ್ಪಾದಿಸಿದೆ ಎಂದು ತಿಳಿಸಲಾಗಿದೆ.

ದೊಡ್ಡ ಪ್ರಮಾಣದಲ್ಲಿ ಕ್ವಾಂಟಮ್ ಚಿಪ್‌ಗಳನ್ನು ಉತ್ಪಾದಿಸುವುದು ಮೊದಲಿನಿಂದಲೂ ದೊಡ್ಡ ಸವಾಲಾಗಿತ್ತು. ಸೈಕ್ವಾಂಟಮ್ ತಾನು ನೀಡಿರುವ ಭರವಸೆಯನ್ನು ಈಡೇರಿಸಿದರೆ ಇದು ದೊಡ್ಡ ಪ್ರಮಾಣದಲ್ಲಿ ಕ್ವಾಂಟಮ್ ಕಂಪ್ಯೂಟರ್ ಬಳಕೆಯತ್ತ ಪ್ರಮುಖ ಹೆಜ್ಜೆ ಆಗಲಿದೆ.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ, ಸಾರ್ವಜನಿಕರಿಗೂ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಮಹಾಂತೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ ಮತ್ತು ಕಲ್ಲೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ, ಆವರಗೆರೆ ವಾಸ, ದಾವಣಗೆರೆ ತಾಲ್ಲೂಕು ಇವರ ಪರವಾಗಿ ಹಾಗೂ ಇವರು ನೀಡಿದ ಅಧಿಕಾರದ ಮೇರೆಗೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ .

ಶ್ರೀಮತಿ ಯಶೋಧಮ್ಮ ಕೋಂ ಲೇಟ್ ಲಿಂಗರಾಜು ಯಾನೆ ರಾಜಪ್ಪ ಆವರಗೆರೆ ವಾಸಿಯಾದ ಇವರು 1) ಎ.ಬಿ. ರೇವಣಸಿದ್ದಪ್ಪ ಬಿನ್ ಲೇಟ್ ಬಸಪ್ಪ, 2) ಮಂಜಮ್ಮ ಕೋಂ ಎ.ಬಿ. ರೇವಣಸಿದ್ದಪ್ಪ, 3) ಚಂದ್ರಶೇಖರ್ ಬಿನ್ ಎ.ಬಿ. ರೇವಣಸಿದ್ದಪ್ಪ, 4) ಶ್ರೀಮತಿ ಪ್ರೇಮಾ ಕೋಂ ಲೋಹಿತ್ ಕುಮಾರ್, 5) ಶ್ರೀಮತಿ ಗೀತಾ ಕೋಂ ಬಸವರಾಜಪ್ಪ, 6) ಶ್ರೀಮತಿ ಮಮತಾ ಕೋಂ ಚಂದ್ರಪ್ಪ 7) ಮಹಾಂತೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ, 8)ಕಲ್ಲೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ, 9) ಸಿದ್ದೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ, ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಹಾಗೂ ಇತರೆ ಸ್ಥಿರಾಸ್ತಿಗಳ ಮೇಲೆ ಅಸಲು ದಾವೆ ಸಂಖ್ಯೆ : 679/2023 ಪ್ರಕರಣವನ್ನು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಪಾಲು ವಿಭಾಗಕ್ಕಾಗಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಮಾನ್ಯ ಘನ ನ್ಯಾಯಾಲಯವು ಕೇಸು ಇತ್ಯರ್ಥವಾಗುವವರೆಗೆ ಮಾರಾಟ, ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಿರುತ್ತದೆ.

ಸದರಿ ಕೇಸಿನಲ್ಲಿ ನನ್ನ ಕಕ್ಷಿದಾರರಾದ ಮಹಾಂತೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ, ಕಲ್ಲೇಶ್ ಬಿನ್ ಎ.ಬಿ. ರೇವಣಸಿದ್ದಪ್ಪ ಇವರು 7 ಮತ್ತು 8ನೇ ಪ್ರತಿವಾದಿಗಳಾಗಿರುತ್ತಾರೆ. ಈ ಕೇಸಿನ ಎದುರುದಾರರಾದ 1 ರಿಂದ 6 ಮತ್ತು 9ನೇ ಪ್ರತಿವಾದಿಗಳು ಹಾಗೂ ಇತರೆ ಪ್ರತಿವಾದಿಗಳು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಈ ಕೇಸು ಇತ್ಯರ್ಥವಾಗುವವರೆಗೆ ಆದೇಶ ಮಾಡಿರುತ್ತದೆ. ಆದ್ದರಿಂದ ಸಾರ್ವಜನಿಕರು ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಿದ ಜಮೀನನ್ನು ಯಾರೂ ಸಹಾ ಖರೀದಿ ಮಾಡಬಾರದಾಗಿ ಹಾಗೂ ನಮ್ಮ ಕಕ್ಷಿದಾರರಿಗೆ ತಿಳಿಯದ ರೀತಿಯಲ್ಲಿ ಮಾರಾಟ ಮಾಡಲು ಹವಣಿಸುತ್ತಿದ್ದಾರೆ. ಇದರ ಬಗ್ಗೆ ಯಾವುದೇ ರೀತಿಯಿಂದ ಮೋಸ ಹೋಗಬಾರದಾಗಿ ಹಾಗೂ ವ್ಯವಹಾರವನ್ನು ಮಾಡಬಾರದಾಗಿ ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಯಾರಾದರೂ ಅಕ್ರಮ, ಕಾನೂನು ಬಾಹಿರವಾಗಿ ಈ ಕೆಳಗಿನ ಜಮೀನಿನ ಬಗ್ಗೆ ಖರೀದಿ ಮಾಡಿದ್ದೇ ಆದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗುವುದು ಹಾಗೂ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ಕಾನೂನು ಕ್ರಮವನ್ನು ಸಹಾ ಜರುಗಿಸಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಸಾರ್ವಜನಿಕರು, ಬಿಲ್ಡರ್‌ಗಳು ಎಚ್ಚೆತ್ತುಕೊಳ್ಳಬೇಕು ಎಂದು ಈ ಮೂಲಕ ತಿಳಿಯಪಡಿಸಿದೆ.

ಈ ಅನುಸೂಚಿ ಆಸ್ತಿ ಸಂಬಂಧ ಈಗಾಗಲೇ ಸದರಿ ಆಸ್ತಿಯನ್ನು ಈ ಹಿಂದೆ ಮಂಜುನಾಥ ಎನ್ನುವವರಿಗೆ ಪ್ರತಿವಾದಿ 1 ರಿಂದ 6 ಮತ್ತು 9ನೇ ಪ್ರತಿವಾದಿಯವರು ಮಾರಾಟ ಮಾಡಿದ್ದಾರೆ. ಇವರ ಮೇಲೆ ಲಿಂಗರಾಜ ಯಾನೆ ರಾಜ ಇವರ 2ನೇ ಹೆಂಡತಿಯಾದ ರೇಣುಕಮ್ಮ,ಮಗನಾದ ಪರಶುರಾಮ್ ಇವರು ಓ.ಎಸ್. ನಂಃ 249/2021 ದಾವೆಯನ್ನು 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಸದರಿ ದಾವೆಯಲ್ಲಿ ಕೇಸು ಇತ್ಯರ್ಥವಾಗುವವರೆಗೆ ಆಸ್ತಿಯನ್ನು ಪರಭಾರೆ, ಮಾರಾಟ ಮಾಡದಂತೆ ನಿರ್ಬಂಧಕಾಜ್ಞೆಯನ್ನು ಮಾಡಿರುತ್ತದೆ. ಆದಾಗ್ಯೂ ಸದರಿ ನ್ಯಾಯಾಲಯದ ಆದೇಶ ಉಲ್ಲಂಘಿಸಿ ಮಂಜಮ್ಮ ಹಾಗೂ ಯಶೋಧಮ್ಮ ಇವರು ಸದರಿ ಅನುಸೂಚಿಯಲ್ಲಿ ವಿವರಿಸಿದ ಆಸ್ತಿಯನ್ನು ಶ್ರೀಧರ್ ಬಿ.ಹೆಚ್. ಇವರಿಗೆ ದಿನಾಂಕ : 21.01.2025 ರಂದು ಅತೀ ಹೆಚ್ಚಿನ ಬೆಲೆಗೆ ಪುನಃ 2ನೇ ವ್ಯಕ್ತಿಗೆ ಮಾರಾಟ ಮಾಡಿರುತ್ತಾರೆ ಹಾಗೂ ಈ ಹಿಂದೆ ಮಾರಾಟ ಮಾಡಿದ ವ್ಯಕ್ತಿಯ ಅನುಮತಿಯನ್ನು ಸಹಾ ತೆಗೆದುಕೊಂಡಿರುವುದಿಲ್ಲ. ಅವರಿಗೂ ಸಹಾ ಮೋಸ ಮಾಡಿ, ಈಗ 2ನೇ ವ್ಯಕ್ತಿಗೆ ಮಾರಾಟ ಮಾಡಿರುತ್ತಾರೆ. ಈ ಸಾರ್ವಜನಿಕ ಪ್ರಕಟಣೆ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಇದರ ಸಂಬಂಧ ಮಂಜಮ್ಮ ಹಾಗೂ ಇತರರ ಮೇಲೆ ಕ್ರಿಮಿನಲ್ ಪ್ರಕರಣವನ್ನು ಮಾಡಲಾಗುತ್ತದೆ. ಹಾಗೂ ಸಂಬಂಧಿಸಿದ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಉಲ್ಲಂಘನೆ ಸಂಬಂಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಆದಾಗ್ಯೂ ಈಗ ಪುನಃ ತರಾತುರಿಯಲ್ಲಿ ಸ್ಥಿರಾಸ್ತಿಯನ್ನು ನೋಂದಣಿ ಮಾಡಿಸುವ ಸಂಬಂಧ, ಬೇರೆಯವರಿಗೆ ಮಾರಾಟ ಮಾಡುವ ಸಂಬಂಧ ಹವಣಿಸುತ್ತಿದ್ದಾರೆ. ಸದರಿ ಅನುಸೂಚಿಯಲ್ಲಿ ವಿವರಿಸಿದ ಸ್ವತ್ತಿನ ಸಂಬಂಧ ಯಾರೂ ಸಹಾ ಮೋಸ ಹೋಗಬಾರದಾಗಿ ಈ ಮೂಲಕ ತಿಳಿಯಪಡಿಸಿದೆ. ಇದರ ಬಗ್ಗೆ ಮಾನ್ಯ ಸಬ್ ರಿಜಿಸ್ಟ್ರಾರ್ ಕಛೇರಿಗೆ, ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಗೆ, ಮಾನ್ಯ ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಗೂ ಸಹಾ ಮಾಹಿತಿಯನ್ನು ನೀಡಲಾಗಿರುತ್ತದೆ.

**ಅನುಸೂಚಿ :** ದಾವಣಗೆರೆ ತಾಲ್ಲೂಕು, ಆವರಗೆರೆ ಗ್ರಾಮದ ಸರ್ವೆ ನಂಃ 129/1 ಒಟ್ಟು 12 ಎಕರೆ 22 ಗುಂಟೆ ಜಮೀನಿನಲ್ಲಿ ನಮಗೆ ಸಂಬಂಧಿಸಿದ 3 ಎಕರೆ 34 ಗುಂಟೆ ಜಮೀನು, ಆಕಾರ ರೂ.11.14 ಇದಕ್ಕೆ ಚಕ್ಕು ಬಂದಿ. **ಪೂರ್ವಕ್ಕೆ:** ಸರ್ವೆ ನಂ: 98 ರಿಂದ 103 ರ ಜಮೀನು, **ಪಶ್ಚಿಮಕ್ಕೆ:** ವಿರುಪಾಕ್ಷಪ್ಪ ಇವರ ಜಮೀನು, **ಉತ್ತರಕ್ಕೆ:** ಇದೇ ಸರ್ವೆ ನಂಬರಿನ ಉಳಿದ ಆಸ್ತಿ, **ದಕ್ಷಿಣಕ್ಕೆ:** ಅಂಬರ್‌ಕರ್ ರವರ ಜಮೀನು.

ಸಹಿ/-
**ಮಹಾಂತೇಶ್**
**ಕಲ್ಲೇಶಪ್ಪ**
7 ಮತ್ತು 8ನೇ ಪ್ರತಿವಾದಿಯರು, ಆವರಗೆರೆ, ದಾವಣಗೆರೆ.

**ಎಸ್.ಪರಮೇಶ್,**
7 ಮತ್ತು 8ನೇ ಪ್ರತಿವಾದಿ ಪರ ವಕೀಲರು,
ಆವರಗೆರೆ, ದಾವಣಗೆರೆ.

# ವಿದೇಶಿ ಕಾರ್ಮಿಕರ ನೆರವಿನಿಂದ ಬೆಳವಣಿಗೆಯಲ್ಲಿ ಯುರೋಪ್ ಹಿಂದೆ ಹಾಕಿದ ಸ್ಪೇನ್

ಮಾಡ್ರಿಡ್ (ಸ್ಪೇನ್), ಮಾ. 2 - ವಿದೇಶಿ ಕಾರ್ಮಿಕರ ನೆರವಿನಿಂದಾಗಿ ಯುರೋಪ್ ಹಾಗೂ ಅಮೆರಿಕಗಳನ್ನು ಹಿಂದೆ ಹಾಕಿರುವ ಸ್ಪೇನ್, ವೇಗದ ಆರ್ಥಿಕ ಬೆಳವಣಿಗೆ ಕಂಡಿದೆ. ಕೈಗಾರೀಕೃತ ದೇಶಗಳ ಪೈಕಿ ಸ್ಪೇನ್ ಈಗ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದೆ.

ಕಳೆದ ವರ್ಷದ ಯುರೋಪ್ ವಲಯದ ಆರ್ಥಿಕ ಬೆಳವಣಿಗೆ ಸರಾಸರಿ ಶೇ. 0.8ರಷ್ಟಿದೆ. ಆದರೆ ಸ್ಪೇನ್ ಆರ್ಥಿಕ ಬೆಳವಣಿಗೆ ಶೇ. 3ರಷ್ಟಿದೆ ಎಂದು ಆರ್ಗನೈಸೇಷನ್ ಫಾರ್ ಎಕನಾಮಿಕ್ ಆಪರೇಷನ್ ಅಂಡ್ ಡೆವಲಪ್‌ಮೆಂಟ್ ಸಂಸ್ಥೆ ತಿಳಿಸಿದೆ. ಕಳೆದ ವರ್ಷ ಅಮೆರಿಕ ಶೇ. 2.8ರ ಬೆಳವಣಿಗೆ ಕಂಡಿತ್ತು.

2022 ರಲ್ಲಿ 5 ಲಕ್ಷ ವಿದೇಶಿ ಕಾರ್ಮಿಕರು ಸ್ಪೇನ್‌ನಲ್ಲಿ ಉದ್ಯೋಗ ಪಡೆದಿದ್ದಾರೆ. ಇದು ಆ ವರ್ಷ ಸೃಷ್ಟಿಯಾದ ಒಟ್ಟು ಉದ್ಯೋಗದ ಶೇ. 45 ರಷ್ಟಾಗಿದೆ. ಸ್ಪೇನ್‌ನಲ್ಲಿ ಈಗ 30 ಲಕ್ಷ ವಿದೇಶಿಯರಿದ್ದಾರೆ. ಇದು ದೇಶದ ಒಟ್ಟು ಉದ್ಯೋಗ ಪಡೆಯ ಶೇ. 13ರಷ್ಟಾಗಿದೆ.

ನಮ್ಮ ಎದುರು ಎರಡು ದಾರಿಗಳಿದ್ದವು. ಸ್ಪೇನ್ ಬಾಗಿಲು ಮುಚ್ಚಿಕೊಂಡು ಬಡ ದೇಶವಾಗಿರಬೇಕಿತ್ತು ಇಲ್ಲವೇ ಬಾಗಿಲು ತೆರೆದು ಸಮೃದ್ಧವಾಗಬೇಕಿತ್ತು. ನಾವು ಎರಡನೇ ದಾರಿ ಆಯ್ಕೆ ಮಾಡಿಕೊಂಡಿದ್ದೇವೆ ಎಂದು ಸ್ಪೇನ್ ಸಚಿವೆ ಎಲ್ಮಾ ಸಾಯೀಜ್ ಹೇಳಿದ್ದಾರೆ.

ಸಾಂಪ್ರದಾಯಿಕವಾಗಿ ಜರ್ಮನಿಯು ಯುರೋಪ್ ಆರ್ಥಿಕತೆಯ ಚಾಲನಾ ಶಕ್ತಿಯಾಗಿತ್ತು. ಜರ್ಮನಿಯು ಉತ್ಪಾದನಾ ವಲಯದಲ್ಲಿ ಮುಂಚೂಣಿಯಲ್ಲಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಜರ್ಮನ್ ಆರ್ಥಿಕತೆ ಸಂಕಷ್ಟ ಎದುರಿಸುತ್ತಿದೆ. ಈ ಸಂದರ್ಭದಲ್ಲಿ ವಿದೇಶಿ ಕಾರ್ಮಿಕರ ನೆರವಿನಿಂದ ಜರ್ಮನಿಗಿಂತ ಸ್ಪೇನ್ ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ಬಾರ್ಸಿಲೋನಾದ ಬ್ಯುಜಿನೆಸ್ ಸ್ಕೂಲ್ ಅರ್ಥಶಾಸ್ತ್ರ ಉಪನ್ಯಾಸಕ ಪೆಡ್ರೋ ಅಜ್ನರ್ ಹೇಳಿದ್ದಾರೆ.

ಸ್ಪೇನ್ ಈ ಹಿಂದೆ ಸೇವಾ ವಲಯವನ್ನು ಹೆಚ್ಚಾಗಿ ಅವಲಂಬಿಸಿತ್ತು. ಅದರಲ್ಲೂ ಪ್ರವಾಸೋದ್ಯಮ ದೇಶದ ಪ್ರಮುಖ ಆದಾಯದ ಮೂಲವಾಗಿತ್ತು. ಸ್ಪೇನ್ ಜನರು



ಸಾಮಾನ್ಯವಾಗಿ ಕಡಿಮೆ ಆದಾಯದ ಉದ್ಯೋಗದಲ್ಲಿ ತೊಡಗಲು ಬಯಸುವುದಿಲ್ಲ. ವಿದೇಶಿ ಕಾರ್ಮಿಕರ ಪೈಕಿ ಬಹುತೇಕರು ಕಡಿಮೆ ಆದಾಯದ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ದಕ್ಷಿಣ ಅಮೆರಿಕದ ಹಲವು ದೇಶಗಳ ಜನರು ಸ್ಪೇನ್ ಭಾಷೆ ಹಾಗೂ ಸಂಸ್ಕೃತಿಗೆ ಚಿರಪರಿಚಿತರಾಗಿದ್ದಾರೆ. ಆ ದೇಶಗಳಿಂದ ಹೆಚ್ಚಾಗಿ ಕಾರ್ಮಿಕರು ಸ್ಪೇನ್‌ಗೆ ವಲಸೆ ಬಂದಿದ್ದಾರೆ.

ಕೊರೊನಾ ನಂತರ ಸ್ಪೇನ್ ಜನಸಂಖ್ಯೆ ಹೆಚ್ಚಳಕ್ಕೆ ವಲಸಿಗರ ಕೊಡುಗೆಯೇ ಹೆಚ್ಚಾಗಿದೆ. 2022 ರಲ್ಲಿ 11 ಲಕ್ಷ ಜನ ಸ್ಪೇನ್‌ಗೆ ವಲಸೆ ಬಂದಿದ್ದರು ಎಂದು ಬ್ಯಾಂಕ್ ಆಫ್ ಸ್ಪೇನ್ ವರದಿ ತಿಳಿಸಿದೆ.

ಯುರೋಪ್ ವಲಯದ ದೇಶಗಳಲ್ಲಿ ವೃದ್ಧಾಪ್ಯದ ಸಮಸ್ಯೆ ಹೆಚ್ಚಾಗಿದೆ. ವಲಸೆ ಬಂದಿರುವವರಲ್ಲಿ ಯುವ ಪೀಳಿಗೆಯವರೇ ಹೆಚ್ಚಾಗಿದ್ದಾರೆ. ಇದು ಸ್ಪೇನ್ ಸಾಮಾಜಿಕ ಭದ್ರತಾ ವ್ಯವಸ್ಥೆಗೆ ನೆರವಾಗಿದೆ ಎಂದು ಬ್ಯಾಂಕ್ ಆಫ್ ಸ್ಪೇನ್ ವರದಿ ತಿಳಿಸಿದೆ.

ಕಳೆದ ವರ್ಷ ಜನವರಿಯಿಂದ ಸೆಪ್ಟೆಂಬರ್ ಅವಧಿಯಲ್ಲಿ 4.33 ಲಕ್ಷ ಜನ ಉದ್ಯೋಗ ಪಡೆದಿದ್ದಾರೆ. ಇವರಲ್ಲಿ ಶೇ.85ರಷ್ಟು ಜನರು ವಿದೇಶಿ ಸಂಜಾತರು ಎಂದು ವರದಿಯಲ್ಲಿ ಹೇಳಲಾಗಿದೆ.

ಸ್ಪೇನ್‌ಗೆ ಅಧಿಕೃತವಾಗಿ ವಲಸೆ ಬಂದವರಲ್ಲಿ ಲ್ಯಾಟಿನ್ ಅಮೆರಿಕದವರೇ ಹೆಚ್ಚಾಗಿದ್ದಾರೆ. ಇತ್ತೀಚಿನ ಗಣತಿಯ ಪ್ರಕಾರ 2023ರಲ್ಲಿ 40 ಲಕ್ಷ ಲ್ಯಾಟಿನ್ ಅಮೆರಿಕದವರು ವಲಸೆ ಬಂದಿದ್ದಾರೆ.

ಕಾನೂನಾತ್ಮಕ ವಲಸೆಯನ್ನು ಸಮರ್ಥಿಸಿಕೊಂಡಿರುವ ಸೋಷಿಯಲಿಸ್ಟ್ ಪ್ರಧಾನಮಂತ್ರಿ ಪೆಟ್ರೋ ಸ್ಯಾಂಚೆಜ್, ವಲಸಿಗರಿಂದ ಆರ್ಥಿಕ ಲಾಭಗಳಾಗಿವೆ ಎಂದಿದ್ದಾರೆ.

ಸ್ಪೇನ್‌ನಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರು ಹಾಗೂ ನಿವೃತ್ತರ ನಡುವೆ ಸಮತೋಲನ ತರಲು ಮುಂದಿನ 30 ವರ್ಷಗಳಲ್ಲಿ 30 ದಶಲಕ್ಷ ಕೆಲಸದ ವಯೋಮಾನದ ವಲಸಿಗರ ಅಗತ್ಯವಿದೆ ಎಂದು ಬ್ಯಾಂಕ್ ಆಫ್ ಸ್ಪೇನ್ ಅಂದಾಜಿಸಿದೆ.

ಸ್ಪೇನ್ ಅಕ್ರಮ ವಲಸಿಗರ ಸಮಸ್ಯೆ ಸಹ ಎದುರಿಸುತ್ತಿದೆ. ಈಗಾಗಲೇ ಅಕ್ರಮವಾಗಿ ವಲಸೆ ಬಂದವರಿಗೆ ಉದ್ಯೋಗದ ಅನುಮತಿ ನೀಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ದೇಶದಲ್ಲಿ ಈಗಾಗಲೇ ಅಕ್ರಮವಾಗಿ ಇರುವ 9 ಲಕ್ಷ ವಿದೇಶಿಯರಿಗೆ ಉದ್ಯೋಗ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪ್ರಧಾನ ಮಂತ್ರಿ ಸ್ಯಾಂಚೆಜ್ ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ತಿಳಿಸಿದ್ದರು.



### ದಾವಣಗೆರೆ ಹಳೆ ಊರಿನ ಶಿವರಾತ್ರಿ ಸ್ವಾರಸ್ಯಗಳು...

## ಕತ್ತೆ ಕಪ್ಪಣ್ಣ ಮೂತಿ ಮಂಗಣ್ಣ?!!

ಶಿವರಾತ್ರಿ ಜಾಗರಣೆಯಂದು ಕೆಲ ತುಂಟ ಹುಡುಗರು ಕತ್ತೆಗಳಿಗೆ ಕಿರುಕುಳ ಕೊಟ್ಟು ಮೋಜು ನೋಡುವುದನ್ನು ನಿನ್ನೆ ಪ್ರಸ್ತಾಪ ಮಾಡಿದ್ದೆ. ನಮ್ಮ ಬಾಲ್ಯದಲ್ಲಿ ದಾವಣಗೆರೆ ಹಳೆ ಊರಿನ ಬೀದಿಗಳಲ್ಲಿ ಕತ್ತೆಗಳು ಸಹ ಹೇರಳವಾಗಿ ಓಡಾಡುತ್ತಿದ್ದವು.

ಅಗಸರ ಗುಡ್ಡಪ್ಪ, ಅಗಸರ ಕೆಂಚಪ್ಪ ಮುಂತಾಗಿ ಅನೇಕ ಮಡಿವಾಳರ ಕತ್ತೆಗಳು ಬೆಳಿಗ್ಗೆ ಬಟ್ಟೆ ಹೊತ್ತುಕೊಂಡು ಅಗಸರ ಜೊತೆಗೆ ಹಳ್ಳಗಳಿಗೆ ಹೋಗಿ ಮಧ್ಯಾಹ್ನದ ನಂತರ ವಾಪಾಸ್ ಬಂದಮೇಲೆ ಕತ್ತೆಗಳನ್ನು ಸ್ವತಂತ್ರವಾಗಿ ಬಿಡುತ್ತಿದ್ದರು. ಅವು ಬೀದಿಗಲ್ಲಿ ಸುತ್ತುತ್ತಾ ರಸ್ತೆಯಲ್ಲಿ ಬಿದ್ದ ಕಸ ಮತ್ತು ಕಾಗದದ ಹಾಳೆಗಳನ್ನೇ ತಿನ್ನುತ್ತಿದ್ದವು. ಒಮ್ಮೊಮ್ಮೆ ಗಂಡು ಕತ್ತೆಗಳು ಕರ್ಣ ಕಠೋರವಾಗಿ ಕಿರುಚುತ್ತಾ ಹೆಣ್ಣು ಕತ್ತೆಯನ್ನು ಬೆನ್ನತ್ತಿ ಓಡುವುದು ಸ್ವಾಭಾವಿಕವಾಗಿತ್ತು.

ಒಮ್ಮೆ ರಸ್ತೆ ಬದಿಯಲ್ಲಿ ರದ್ದಿ ಹಾಳೆಯನ್ನು ತಿನ್ನುತ್ತಿದ್ದ ಕತ್ತೆಗೆ ಪುಟ್ಟ ಹುಡುಗ ಷಣ್ಮುಖಿ ಪುಟ್ಟ ಕೋಲನ್ನು ತೆಗೆದುಕೊಂಡು ಹೊಡೆಯಲು ಹೋದ. ಇದನ್ನು ನೋಡಿದ ಅಣ್ಣೇಗೇರಿ ಮುರುಗೆಮ್ಮಜ್ಜಿ "ಲೇ ಹುಡುಗಾ ಹೊಡಿಬ್ಯಾಡಲೇ, ನೀನೂ ಕತ್ತಿ ಕಪ್ಪಣ್ಣ ಮೂತಿ ಮಂಗಣ್ಣ ಆಗ್ತಿದಿ" ಎಂದರು.

ಮುರುಗೆಮ್ಮಜ್ಜಿ ಹೇಳಿದ ಕತ್ತೆ ಕಪ್ಪಣ್ಣ ಮೂತಿ ಮಂಗಣ್ಣನ ಬಗ್ಗೆ ಆಮೇಲೆ ಹೇಳುವೆ. ಅದಕ್ಕೂ ಮೊದಲು ಬಾಲ್ಯದಲ್ಲಿ ನಮ್ಮ ಜಾಗರಣೆ ಪರಿಯನ್ನು ಹೇಳಬೇಕೆಂದರೆ ತಡ ರಾತ್ರಿಯವರೆಗೂ ಬೇರೆ ಬೇರೆ ದೇವಸ್ಥಾನಗಳಿಗೆ ಹೋಗಿ ಬರುವವರು ಬೀದಿಯಲ್ಲಿ ಭಕ್ತಿಪರವಶರಾಗಿ ಓಡಾಡುವುದನ್ನು ನೋಡುವುದೇ ನಮಗೆ ಸಂಭ್ರಮ.

ಅಲ್ಲದೆ ನಾವು ಅಣ್ಣ ತಮ್ಮ ಅಕ್ಕ ತಂಗಿಯರು ಒಟ್ಟಾಗಿ ಶಿವ ಧ್ಯಾನ, ಶಿವ ಭಜನೆ ಮಾಡುವಾಗ ಜಯದೇವ ಪ್ರೆಸ್‌ನ ಕಣ್ವಕುಪ್ಪೆ ಗುರುಪಾದಪ್ಪನವರು ಹೇಳಿಕೊಟ್ಟ ಶಿವ ಕವಿಯ ಅಕ್ಷರ ಶಿವ ನಾಮ ಸಂಕೀರ್ತನೆ 'ಅ'ಕಾರದಿಂದ 'ಕ್ಷ' ಕಾರದವರೆಗೆ ಎಲ್ಲಾ ಅಕ್ಷರಗಳಲ್ಲೂ ಶಿವನನ್ನು ಸ್ತುತಿಸುವ 'ಅದ್ಭುತ ವಿಗ್ರಹ ಅಮರಾಧೀಶ್ವರ ಅಗಣಿತ ಗುಣಗಣ ಅಮೃತಶಿವ, ಆನಂದಾಮೃತ ಆಶ್ರಿತ ರಕ್ಷಕ ಆತ್ಮಾನಂದ ಮಹೇಶ ಶಿವ, ಇಂದು ಕಲಾಧರ ಇಂದ್ರಾದಿಪ್ರಿಯ ಸುಂದರ ರೂಪ ಸುರೇಶ ಶಿವ, ಈಶ ಸುರೇಶ ಮಹೇಶ ಜನಪ್ರಿಯ ಕೇಶವ ಸೇವಿತ ಸೇವ್ಯ ಶಿವ, ಉರಗಾದಿಪ್ರಿಯ ಭೂಷಣ ಶಂಕರ ನರಕ ವಿನಾಶ ನಟೇಶ ಶಿವ....' ಹೀಗೆ ಅ ಆ ಇ ಈ ಉ ಊ ದಿಂದ ಕೃ ತ್ರ ಘ್ನ ದವರೆಗೆ ಎಲ್ಲ ಅಕ್ಷರಗಳಲ್ಲೂ ಶಿವಧ್ಯಾನ ವಿರುತ್ತಿತ್ತು.

ನಮ್ಮ ಜಾಗರಣೆ ಹೀಗಾದರೆ ಕೆಲವರು ಸೆಕೆಂಡ್ ಶೋ ಥರ್ಡ್ ಶೋ ಫೋರ್ತ್ ಶೋ ಅಂತ ಹೇಳಿ ಸಿನಿಮಾಗಳಿಗೂ ಹೋಗುತ್ತಿದ್ದರು. ಸುದೈವ ವಶಾತ್ ಆಗ ಪೌರಾಣಿಕ ಚಲನಚಿತ್ರಗಳನ್ನು ಮಾತ್ರ ಶಿವರಾತ್ರಿಯ ದಿನದಂದು ಪ್ರದರ್ಶಿಸಲಾಗುತ್ತಿತ್ತು.

ಕೆಲವರು ಒಂದೆಡೆ ಕುಳಿತುಕೊಂಡು ರಂಜನೀಯವಾಗಿ ಕಾಡು ಹರಟೆ ಹೊಡೆಯುತ್ತಾ, ರಾತ್ರಿ ಕಳೆದರೆ ಮತ್ತೆ ಕೆಲವು ತುಂಟ ಹುಡುಗರು ಸೈಕಲ್ಲಿನ ಹಿಂದಿನ ಚಕ್ರ ಹಾಗೂ ಮಡ್ ಗಾರ್ಡ್ ನಡುವೆ ಒಂದು ದಾರಕ್ಕೆ ರಟ್ಟಿನ ತುಂಡು ಕಟ್ಟಿ ಅದನ್ನು ಚಕ್ರದ ತಂತಿಗಳಿಗೆ ತಾಗುವಂತೆ ಮಾಡಿ ವೇಗವಾಗಿ ಸೈಕಲ್ ತುಳಿದುಕೊಂಡು ಹೋಗುವಾಗ ಕರ್ಕಶವಾಗಿ 'ಪರ್ ಪರ್' ಎಂಬುವ ಎಂಬ ಶಬ್ದ ಮಾಡುತ್ತಾ ರಸ್ತೆಗಳಲ್ಲಿ ಸುತ್ತುವುದೇ ಜಾಗರಣೆಯ ಮೋಜು ಆಗಿತ್ತು.

ಕೆಲವು ತುಂಟ ಹುಡುಗರು ಮಾತ್ರ ಕತ್ತೆಗಳ ಬಾಲಕ್ಕೆ ಖಾಲಿ ಡಬ್ಬ ಕಟ್ಟಿ ಅವನ್ನು ಓಡಿಸುವುದು, ಕತ್ತೆಗಳು ಓಡುವಾಗ ಬಾಲಕ್ಕೆ ಕಟ್ಟಿದ ಖಾಲಿ ಡಬ್ಬ ರಸ್ತೆಯಲ್ಲಿ ಗೆರಚಿಗೊಂಡಾಗಿನ ಶಬ್ದಕ್ಕೆ ಮತ್ತಷ್ಟು ಹೆದರಿ ಕತ್ತೆಗಳು ಕಿರುಚುತ್ತಾ ಮತ್ತೂ ಜೋರಾಗಿ ಓಡುವುದು ತುಂಟ ಹುಡುಗರಿಗೆ ದೊಡ್ಡ ಮೋಜು ಆಗಿರುತ್ತಿತ್ತು.

ಹೀಗೆ ಒಮ್ಮೆ ಕತ್ತೆ ಬಾಲಕ್ಕೆ ಡಬ್ಬ ಕಟ್ಟಲು ಹೋದ ಕಪ್ಪಣ್ಣ ಬಹುಶಃ ಅವನ ಹೆಸರು ಕಪಿಲೇಶ ಅಥವಾ ಕಲ್ಲೇಶವೂ ಇರಬಹುದು, ಕರೆಯುವುದು ಕಪ್ಪಣ್ಣ ಎಂದು, ಕಪಣ್ಣನ ಮುಖಕ್ಕೆ ಕತ್ತೆ ಜಾಡಿಸಿ ಒದ್ದು ತುಟಿಗಳು ಊದಿಕೊಂಡವು. ಅಲ್ಲಿಂದ ಅವನಿಗೆ 'ಕತ್ತೆ ಕಪ್ಪಣ್ಣ ಮೂತಿ ಮಂಗಣ್ಣ' ಎಂದು ಜೊತೆಯ ಹುಡುಗರಷ್ಟೇ ಅಲ್ಲ ಬೀದಿಯ ದೊಡ್ಡವರೂ ಗೇಲಿ ಮಾಡಿದರು. ಇದನ್ನೇ ಷಣ್ಮುಖಿಗೆ ಮುರಿಗೆಮ್ಮಜ್ಜಿ ಹೇಳಿದ್ದು.

**- ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ,
ದಾವಣಗೆರೆ.

## 15 ರಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಮಾ.2- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಇದೇ ದಿನಾಂಕ 15 ರಂದು ನಗರದ ಸರ್ಕಾರಿ ಐಟಿಐ ಕಾಲೇಜಿನ ಆವರಣದಲ್ಲಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಉದ್ಯೋಗದಾತ 40 ಕ್ಕೂ ಹೆಚ್ಚು ಬೃಹತ್ ಬಹುರಾಷ್ಟ್ರೀಯ ಕಂಪನಿಗಳು, ಕೈಗಾರಿಕೆಗಳು ಭಾಗವಹಿಸುತ್ತಿದ್ದು, ವಿವಿಧ ಕ್ಷೇತ್ರಗಳಲ್ಲಿ ಅವಶ್ಯವಿರುವ ಸುಮಾರು 3000 ಕ್ಕೂ ಹೆಚ್ಚು ಹುದ್ದೆಗಳಿಗೆ ಅರ್ಹ ಯುವಕ - ಯುವತಿಯರನ್ನು ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದವರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕ್ಯೂ. ಆರ್ ಕೋಡ್ ಲಿಂಕ್, Google Form Link: https://tinyurl.com/mnm8vykz, ಇ-ಮೇಲ್ ಐಡಿ : Lr: dsmod-vg@gmail.com ದೂ.ಸಂ: 08192-259447, 7892956667 ಸಂಪರ್ಕಿಸಲು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ಹಾಗೂ ಜಿ.ಪಂ ಸಿಇಒ ಸುರೇಶ್.ಬಿ.ಇಟ್ನಾಳ್ ತಿಳಿಸಿದ್ದಾರೆ.

## ಜಿಲ್ಲೆಗಳಲ್ಲಿ ಧನ್ವಂತರಿ ವನಕ್ಕೆ ಚಿಂತನೆ

(1ನೇ ಪುಟದಿಂದ) ಮಂಡಳಿ ವಿವಿಧ ಕಾರ್ಯಗಳನ್ನು ಮಾಡುತ್ತಿದೆ. ಈಗಾಗಲೇ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಔಷಧೀಯ ಸಸ್ಯಗಳನ್ನು ದಾಖಲೀಕರಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಹಳ ಶ್ರೀಮಂತವಾದ ಅರಣ್ಯ ಪ್ರದೇಶವಿದೆ. ಎಲ್ಲ ಪ್ರಭೇದದ ಔಷಧೀಯ ಸಸ್ಯಗಳಿವೆ. ಯಾವ್ಯಾವ ಸಸ್ಯಗಳಲ್ಲಿ ಯಾವ ರೋಗಗಳಿಗೆ ಚಿಕಿತ್ಸೆ ಕೊಡಬಲ್ಲ ಔಷಧೀಯ ಗುಣಗಳ ಸಸ್ಯಗಳಿವೆ ಎನ್ನುವುದರ ಬಗ್ಗೆ ಪ್ರಚಾರ ಆಗಬೇಕಿದೆ. ಆಗ ಜನರಲ್ಲಿ ಕೂಡ ನಂಬಿಕೆ ಬರುತ್ತದೆ. ಪಾರಂಪರಿಕ ವೈದ್ಯ ಪದ್ಧತಿಯ ಚಿಕಿತ್ಸೆಯಿಂದ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಆಗುವುದಿಲ್ಲ. ಅಲೋಪಥಿಕ್ ಬಹಳ ಮುಂದುವರೆದ ಚಿಕಿತ್ಸೆ ಇದೆ. ಆದರೆ, ಸಾಕಷ್ಟು ಅಡ್ಡ ಪರಿಣಾಮಗಳಿವೆ. ಪಾರಂಪರಿಕ ಚಿಕಿತ್ಸೆಯಿಂದ ರೋಗ ನಿಧಾನವಾಗಿ ಗುಣಮುಖವಾಗುತ್ತದೆ. ಆದರೆ, ದೀರ್ಘಕಾಲೀನವರೆಗೆ ಅದರಿಂದ ಅನುಕೂಲ ವಾಗುತ್ತದೆ ಎಂದು ಅದರ ಮಹತ್ವ ವಿವರಿಸಿದರು.

ಪಾರ್ಶ್ವವಾಯು ರೋಗಿಗಳು ಈಗಲೂ ಪಾರಂಪರಿಕ ವೈದ್ಯರ ಬಳಿಗೆ ಹೋಗುತ್ತಾರೆ. ಅಸ್ತಮಾ ರೋಗಕ್ಕೆ ಮೀನಿನಲ್ಲಿ ಔಷಧಿ ಕೊಡುತ್ತಾರೆ. ಅದರಿಂದ ರೋಗ ಗುಣಮುಖವಾಗುತ್ತದೆ. ಪಾರಂಪರಿಕ ಮತ್ತು ಆಯುರ್ವೇದ ಚಿಕಿತ್ಸೆ ಅನೇಕ ರೀತಿಯ ರೋಗಗಳಿಗೆ ದಿವ್ಯ ಔಷಧಿ. ಔಷಧೀಯ ಸಸ್ಯಗಳ ಬಗ್ಗೆ ಮಾಹಿತಿ, ಜ್ಞಾನ ಕಡಿಮೆ ಆಗುತ್ತಿದೆ. ನಶಿಸಿ ಹೋಗುತ್ತಿವೆ. ಔಷಧೀಯ ಗುಣ ಹೊಂದಿರುವ ಸಸಿಗಳ ಸಂರಕ್ಷಣೆ, ಯಾವ ಮರ, ಎಲೆ, ಬಳ್ಳಿಯಲ್ಲಿ ಔಷಧೀಯ ಗುಣಧರ್ಮ ಇದೆ ಎಂಬುದು ಪಾರಂಪರಿಕ ವೈದ್ಯರಿಗೆ ಗೊತ್ತಿದೆ. ಮೂರು ದಿನಗಳ ಸಮ್ಮೇಳನದ ಅವಧಿಯಲ್ಲಿ ಅನೇಕ ಗೋಷ್ಠಿಗಳು ನಡೆಯಲಿವೆ. ಆ ಗೋಷ್ಠಿಗಳಲ್ಲಿ ತಜ್ಞರು, ಸಂಶೋಧಕರು ಮಂಡಿಸುವ ವಿಷಯಗಳನ್ನು ದಾಖಲಿಸಿ, ಜೀವ ವೈವಿಧ್ಯ ಮಂಡಳಿಗೆ ಸಲ್ಲಿಸಬೇಕು. ಅದರ ಮೇಲೆ ಸರ್ಕಾರ ಸೂಕ್ತ ಕ್ರಮ ಜರುಗಿಸಲಿದೆ ಎಂದು ಭರವಸೆ ನೀಡಿದರು.

ಪಾರಂಪರಿಕ ವೈದ್ಯ ಪರಿಷತ್ ಗೌರವ ಅಧ್ಯಕ್ಷ ಬಸವ ನಾಗಿದೇವ ಶರಣರು, ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಪಾರಂಪರಿಕ ವೈದ್ಯರು ಪಾಲ್ಗೊಂಡಿದ್ದರು.

### ಮೂವರಿಗೆ ಜೀವ ವೈವಿಧ್ಯ ಪ್ರಶಸ್ತಿ

ಜೀವ ವೈವಿಧ್ಯ ಮಂಡಳಿಯಿಂದ ನೀಡಲಾಗುವ ಅತ್ಯುತ್ತಮ ಜೀವ ವೈವಿಧ್ಯ ನಿರ್ವಹಣಾ ಪ್ರಶಸ್ತಿಯನ್ನು ಉಡುಪಿಯ ಆಶಾ, ಅತ್ಯುತ್ತಮ ಸಾವಯವ ಕೃಷಿ ಪದ್ಧತಿಗಾಗಿ ಮಂಡ್ಯದ ಬಿ. ರಾಮಲಿಂಗಯ್ಯ ಹಾಗೂ ಅತ್ಯುತ್ತಮ ಜೀವ ವೈವಿಧ್ಯ ಸಂರಕ್ಷಣೆ ಪ್ರಶಸ್ತಿಯನ್ನು ಶಿವಮೊಗ್ಗದ ಚಕ್ರವತ ಸುಬ್ರಮಣ್ಯ ಅವರಿಗೆ ಸಚಿವ ಈಶ್ವರ ಬಿ. ಖಂಡ್ರೆ ಅವರು ಪ್ರದಾನ ಮಾಡಿದರು. ಪ್ರಶಸ್ತಿಯು ತಲಾ 50 ಸಾವಿರ ರೂ. ನಗದು ಹಾಗೂ ಪ್ರಮಾಣ ಪತ್ರ ಒಳಗೊಂಡಿದೆ.

### ಎರಡು ವರ್ಷಗಳಲ್ಲಿ 9 ಕೋಟಿ ಸಸಿ

'ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಅರಣ್ಯ ಇಲಾಖೆಯಿಂದ ಒಟ್ಟು 9 ಕೋಟಿ ಸಸಿಗಳನ್ನು ನೆಡಲಾಗಿದೆ. ಅರಣ್ಯ ಬ್ಲಾಕ್‌ಗಳಲ್ಲಿ ಕಂದಾಯ ಹಾಗೂ ರೈತರ ಜಮೀನುಗಳಲ್ಲಿ, ರಸ್ತೆ ಬದಿಯಲ್ಲಿ ಗಿಡ ಮರಗಳನ್ನು ಬೆಳೆಸಲಾಗುತ್ತಿದೆ' ಎಂದು ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

## ದ್ವಿಬಳಕೆಯಾದರೆ ನಕಲಿ ಮತದಾರರ ಎಂದಲ್ಲ

(1ನೇ ಪುಟದಿಂದ) ಎಂದು ಆಯೋಗ ಹೇಳಿದೆ. ವಿಕೇಂದ್ರೀಕರಣ ಹಾಗೂ ಮಾನವ ವ್ಯವಸ್ಥೆಯ ಮೂಲಕ ಗುರುತಿನ ಚೀಟಿ ಸಂಖ್ಯೆಗಳನ್ನು ವಿತರಿಸಲಾಗಿತ್ತು. ನಂತರದಲ್ಲಿ ಮತದಾರರ ಗುರುತಿನ ಚೀಟಿ ಸಂಖ್ಯೆ ವ್ಯವಸ್ಥೆಯನ್ನು ಕೇಂದ್ರೀಕೃತ ವೇದಿಕೆಗೆ ತರಲಾಗಿತ್ತು. ಹೀಗಾಗಿ ಎರೊನೆಟ್ ಎಂಬ ಕೇಂದ್ರೀಕೃತ ವ್ಯವಸ್ಥೆಗೆ ಮೊದಲು ನೀಡಲಾದ ಗುರುತಿನ ಚೀಟಿಗಳು ಒಂದೇ ಸಂಖ್ಯೆ ಹೊಂದಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ಗೊಂದಲ ನಿವಾರಿಸುವ ಸಲುವಾಗಿ ಪ್ರತಿಯೊಬ್ಬ ಮತದಾರನಿಗೆ ವಿಶಿಷ್ಟ ಗುರುತಿನ ಸಂಖ್ಯೆ ನೀಡಲು ಚುನಾವಣಾ ಆಯೋಗ ನಿರ್ಧರಿಸಿದೆ. ಇದಕ್ಕಾಗಿ ಎರೊನೆಟ್ 2.0 ವೇದಿಕೆಯನ್ನು ರೂಪಿಸಲಾಗುತ್ತಿದೆ.

## ರಾಷ್ಟ್ರೀಯ ವೃತ್ತಿ ರಂಗೋತ್ಸವ : ನಗರದಲ್ಲಿ ಇಂದು ಸಭೆ

ವೃತ್ತಿ ರಂಗಭೂಮಿ ರಂಗಾಯಣದ ವತಿಯಿಂದ ದೃಶ್ಯಕಲಾ ಮಹಾ ವಿದ್ಯಾಲಯದಲ್ಲಿ ಇದೇ ಇದೇ ದಿನಾಂಕ 15ರಿಂದ 17ರವರೆಗೆ 3 ದಿನಗಳ ಕಾಲ ರಾಷ್ಟ್ರೀಯ ವೃತ್ತಿ ರಂಗೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರ ಪ್ರಯುಕ್ತ ಇಂದು ಸಂಜೆ 4 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ ಎಂದು ವಿಶೇಷಾಧಿಕಾರಿ ರವಿಚಂದ್ರ ತಿಳಿಸಿದ್ದಾರೆ.

### ಸಹನೆ...

ಸಹನೆ, ತಾಳ್ಮೆಯಿರಲು ಜೀವನವು
ಬಾಳಿನಲಿ ಅದು ಹೊಂಗಿರಣವು
ಸಂಸ್ಕಾರದಲ್ಲಿ ಬೆಳಗಿ ಮಿಂಚುತಲಿ
ಪ್ರೀತಿ ಪ್ರೇಮ ಸಂಸ್ಕೃತಿ ಹಂಚುತಲಿ!

**ವೀಣಾ ಕೃಷ್ಣಮೂರ್ತಿ, ದಾವಣಗೆರೆ.**



## ಶಿವರಾತ್ರಿ : ನಗರದ ಶ್ರೀ ಕೇದಾರನಾಥ ದೇವಾಲಯದಲ್ಲಿ ವಿಶೇಷ ಪೂಜೆ

ದಾವಣಗೆರೆ, ಫೆ. 27 - ನಗರದ ಹೊಂಡದ ಸರ್ಕಲ್, ತುಳಸಿ ಪಾರ್ಕ್ ಬಳಿಯ ಶ್ರೀ ಕೇದಾರನಾಥ ದೇವಾಲಯದಲ್ಲಿ ಶಿವರಾತ್ರಿ ಪ್ರಯುಕ್ತ ಶ್ರೀ ಗಣಪತಿ ಹೋಮ, ನವಗ್ರಹ ಪೂಜೆ, ನಂತರ ಶ್ರೀ ಸ್ವಾಮಿಗೆ ರುದ್ರಾಭಿಷೇಕ ನಡೆಯಿತು. ಇದೇ ಸಂದರ್ಭದಲ್ಲಿ ಉಕೀ ಮಠದ ಶ್ರೀ ಓಂಕಾರೇಶ್ವರ ದೇವಾಲಯದ ಆವರಣದಲ್ಲಿ ಕೇದಾರ ಪೀಠದ ಜಗದ್ಗುರು ಶ್ರೀ ಭೀಮಾಶಂಕರ ಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬರುವ ಮೇ 2ರ ಶುಕ್ರವಾರ ಬೆಳಿಗ್ಗೆ 7 ಘಂಟೆಗೆ ಹಿಮಾಲಯದ ಶ್ರೀ ಕೇದಾರನಾಥ ದೇವಾಲಯದ ಬಾಗಿಲು ತೆರೆಯಲಾಗುವುದು ಎಂದು ಪಂಚಾಂಗ ಶ್ರವಣದ ಮೂಲಕ ತಿಳಿಸಲಾಯಿತು ಎಂದು ಇಂದೂಧರ್ ನಿಶಾನಿಮಠ್ ತಿಳಿಸಿದ್ದಾರೆ.

**ಮನೆಗಳು ಮಾರಾಟಕ್ಕಿವೆ**
ಹೊಸದಾಗಿ ಕಟ್ಟುತ್ತಿರುವ ಅಪಾರ್ಟ್‌ಮೆಂಟ್‌ನಲ್ಲಿ ಮನೆಗಳನ್ನು ಅಡ್ವಾನ್ಸ್ ಬುಕ್ ಮಾಡಿಸಿ ಕೊಡುತ್ತೇವೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ರೆಸ್ಟೋರೆಂಟ್ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯಗಳನ್ನು ಹೊಂದಿರುವ ರೆಸ್ಟೋರೆಂಟ್ ಬಾಡಿಗೆಗೆ ಇದೆ ಹಾಗೂ ಮಂಡಿಪೇಟೆ SBI ಬ್ಯಾಂಕ್ ಎದುರುಗಡೆ ಇರುವ ಮಳಿಗೆ ಬಾಡಿಗೆಗೆ ಇದೆ.
96638 28812

**WANTED**
Banking Sector Tele Caller
(Female Only)
Qualfication : Any Degree
98448 58248
Interview Time : 11AM

**ಅಂಗಡಿಯಲ್ಲಿ ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ & ಪೇಂಟ್ಸ್
ಅಶೋಕ ಟಾಕೀಸ್ ಎದುರು, ದಾವಣಗೆರೆ.

**ಇಂಡಸ್ಟ್ರೀಯಲ್ ಸೈಟು ಮಾರಾಟಕ್ಕಿದೆ**
ಪಿ.ಬಿ. ರಸ್ತೆಯಿಂದ ಒಳ ಹೋಗುವ ನೇರ ರಸ್ತೆಗೆ (M.R.Tyre Show room ಪಕ್ಕದ ರಸ್ತೆ) ಪೂರ್ವ ಮುಖವಾಗಿ ಇರುವ 25x88 ಅಡಿ ಅಳತೆಯ ಸೈಟು ಮಾರಾಟಕ್ಕೆ ಇದೆ. ಸಂಪರ್ಕಿಸಿ.
Mohan Real Estate Agencies
97424 34049

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ SSLC / PUC ಪಾಸ್ / ಫೇಲ್ ಆದ ಪುರುಷರು / ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಡ್ರೈವಿಂಗ್ ಲೈಸೆನ್ಸ್ ಕಡ್ಡಾಯ. ಸಮಯ ಬೆಳಿಗ್ಗೆ 9 ರಿಂದ ರಾತ್ರಿ 8ರವರೆಗೆ.
ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್ಸ್
ಟೈಯರ್ ಶಾಪ್ ಹತ್ತಿರ, ಲಾಯರ್ ರೋಡ್, ದಾವಣಗೆರೆ

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಸಮಯ : ಬೆ.10 ರಿಂದ ಸಂ. 7.30 ರವರೆಗೆ
ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್ಸ್
ಟಯರ್ ಶಾಪ್ ಹತ್ತಿರ, ಲಾಯರ್ ರೋಡ್, ದಾವಣಗೆರೆ

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಸಿತಾರಾ ಬಾರ್ ಹತ್ತಿರ ಬಾಡಿಗೆ ಬರುವಂತಹ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ. 40x22ರಲ್ಲಿ ನಾಲ್ಕು ಮಳಿಗೆಗಳು, ರೂ. 85 ಲಕ್ಷಕ್ಕೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ನಮ್ಮ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು ಮಾತ್ರ. ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1
86604 12149

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ.
63641 33480

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಬೇಕಾಗಿದ್ದಾರೆ**
ನಾಲ್ಕು ವರ್ಷದ ಮಗುವಿಗೆ ಮನೆ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ. ಸಂಪರ್ಕಿಸಿ :
8147450186

**ಡ್ರೈವರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಬಾಡಿಗೆಗೆ ದೊರೆಯುತ್ತದೆ
ಮಾರುತಿ ಸ್ವೀಪರ್ ಕ್ಯಾರಿ ಮತ್ತು ಅಶೋಕ್ ಲೇಲ್ಯಾಂಡ್ ಕಂಟೈನರ್ ಗಾಡಿಗಳೂ ದಿನದ, ವಾರ, ತಿಂಗಳ ಲೆಕ್ಕದಲ್ಲಿ ಬಾಡಿಗೆಗೆ ದೊರೆಯುತ್ತವೆ.
87927 45071

**ಬಿಲ್ಲಿಂಗ್‌ಗೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ ;
90367-34919

**ಬೇಕಾಗಿದ್ದಾರೆ**
ಅಶ್ವಮೇಧ ಬಾರ್ & ರೆಸ್ಟೋರೆಂಟ್‌ನಲ್ಲಿ ತಂದೂರಿ, ಚೈನೀಸ್, ಇಂಡಿಯನ್ ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಬಳ : 25,000 ರಿಂದ 30,000 (ಅನುಭವದ ಮೇರೆಗೆ)
74831 76531, 8548824277

**ಬೇಕಾಗಿದ್ದಾರೆ**
ಸಸ್ಯಹಾರಿ ಅಡುಗೆ ಮಾಡಲು ಮಹಿಳಾ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ : ಎಸ್.ಎಸ್. ಲೇಔಟ್ 'ಎ' ಬ್ಲಾಕ್, 10ನೇ ಕ್ರಾಸ್, ಅಥಣಿ ಕಾಲೇಜ್ ರೋಡ್, ದಾವಣಗೆರೆ.
98803 04009

**Lining Blouse Stiching charges Only 250/-**
2ND MAIN, 7TH CROSS, NIJALINGAPPA LAYOUT, DAVANGERE-4
M: 98446 78785

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ 50 (ಐವತ್ತು) ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಯಸ್ಸಿನ ಮಿತಿಯಿಲ್ಲ ಆಕರ್ಷಕ ಸಂಬಳ ಕೊಡಲಾಗುವುದು.
PF & ESI ಸೌಲಭ್ಯವಿರುತ್ತದೆ.
91102 03348, 90352 10034

**ಸೈಟುಗಳು ಮಾರಾಟಕ್ಕಿವೆ**
SS B 40x66 ಪಶ್ಚಿಮ, SS B 35x70 ಪೂರ್ವ, 40x60 ದಕ್ಷಿಣ, SS B ಬನಶಂಕರಿ ಬಡಾವಣೆ 30x65 ಪೂರ್ವ.
ಏಜೆಂಟರು
81231 15137

**ಲೀಸ್‌ಗೆ 1BHK ಮನೆಗಳು ಲಭ್ಯ**
ಸ್ಥಳ: ದಾವಣಗೆರೆ ನ್ಯಾಯಾಲಯ (Davangere Court) ಸಮೀಪ, ದೇವರಾಜ ಅರಸು ಲೇಔಟ್ 'A' Block ವಿಶಾಲ ಮತ್ತು ಸುಸಜ್ಜಿತ ಮನೆಗಳು ಲಭ್ಯ
96201 64304

**ಅಡಿಕೆ ತೋಟ ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಗಿ ಗ್ರಾಮ 3 ಎಕರೆ.
100% Legal Documents Upto date, loan facility available for purchase & Development of Agri Land.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಆರ್.ಜಿ. ರೇವಣಸಿದ್ದಪ್ಪ
97391 17958

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ ಸಂಪರ್ಕಿಸಿ :
ಎಂ.ಟಿ. ಬಸವರಾಜು ಎಂ.ಎಸ್ಸಿ. ಭೂ ವಿಜ್ಞಾನಿಗಳು
94492 02888
86608 03384

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು.
ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ :
89708 16788

**ತಕ್ಷಣ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 91648 98621

**TYPIST WANTED**
Harsha Associates
Chethana Hotel Road.
94480 56468

**ಹೋಟೆಲ್‌ಗೆ ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುವ ಹೋಟೆಲ್‌ಗೆ ಅಡುಗೆ ಭಟ್ಟರು, ಬೆಣ್ಣೆ ದೋಸೆ ಭಟ್ಟರು ಬೇಕಾಗಿದ್ದಾರೆ.
98442 86954

**ಬೆಂಗಳೂರಿನಲ್ಲಿ ಬಿಲ್ಡಿಂಗ್ ಮೇಲ್ವಿಚಾರಕರು ಬೇಕಾಗಿದ್ದಾರೆ**
12 ಗಂಟೆಗಳ ಕೆಲಸ, ಇಂಗ್ಲೀಷ್ ಮತ್ತು ಬೇಸಿಕ್ ಕಂಪ್ಯೂಟರ್ ಜ್ಞಾನ ಅಗತ್ಯವಿದೆ.
ಸಂಬಳ 15000/-
ಬೈಕ್ ಓಡಿಸಬೇಕು. ವಸತಿ ಇದೆ.
97400 98047

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸ ಮಾಡಿಕೊಂಡು ಇರುವ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
98448 61197
99647 43661

**CHANGE OF NAME**
I AMEERA BANU W/O RIYAZ AHAMED MUNSHI, aged about 57 years, resident of H.No. 188, 11th Cross, A Block, Devaraj Urs Layout, Behind Pooja Hotel, Davangere-06. In my passport bearing No. M5997641 my name wrongly entered as AMEERA BANU RIYAZ AHMED. I corrected my name is (As per Aadhar Card) AMEERA BANU. My name is corrected for rectification in Passport. Affidavit dated 28.02.2025 sworn before Notary Public Davanagere. AMEERA BANU

**CHANGE OF NAME**
I RIYAZ AHAMED MUNSHI S/O KUTHUBUDDIN, aged about 60 years, resident of H.No. 188, 11th Cross, A Block, Devaraj Urs Layout, Behind Pooja Hotel, Davangere-06. In my passport bearing No. M5998043 my name wrongly entered as RIAZ AHMED MUNSHI. I corrected my name is (As per Aadhar Card) RIYAZ AHAMED MUNSHI. My name is corrected for rectification in Passport. Affidavit dated 28.02.2025 sworn before Notary Public Davanagere. RIYAZ AHAMED MUNSHI.

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಶನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲ್ಯುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು.
Swapna cushion work
ಮಹಾರಾಜ ಪೇಟೆ ದಾವಣಗೆರೆ.
98445- 81966

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Freshers / Experienced
Address :
VAHIN GROUPS
3096, Bapuji High School Road, MCC `B' Block, Davanagere.
93805 83672

**ಸೈಟ್ ಮತ್ತು ಮನೆಗಳು ಮಾರಾಟಕ್ಕಿವೆ**
MCC 'B' 40x60 ಪಶ್ಚಿಮ,
MCC 'B' 40x60 ಉತ್ತರ ಮನೆ,
MCC 'B' 40x60 ಪೂರ್ವ ಸೈಟ್.
ಏಜೆಂಟರು
81231 15137

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**For Sale**
30x50 ground floor buliding TC Layout
Contact :
94488 73579

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಅನುಭವವ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ದಾವಣಗೆರೆ.
ಸ್ಯಾಲರಿ 13,000, ರಿಂದ 15,000/-
93525 46144, 97388 75438

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**TUITIONS**
Class 1-10
(State/CBSE / ICSE / IGCSE / Olympiad
PU 1-2 (PCMB)
Supplementary
98444 92888

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ್. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೇವಕಿ ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಮಗುವಿನ ಆರೈಕೆಗಾಗಿ ಅನುಭವ ಹೊಂದಿರುವ ಸೇವಕಿ ಬೇಕಾಗಿದ್ದಾರೆ.
ಸಮಯ : ಬೆಳಗ್ಗೆ 8 ರಿಂದ ಸಂಜೆ 7
ಸಂಬಳ : ರೂ. 9,000 - ರೂ. 10,000
96201 64304

# ರಾಷ್ಟ್ರಪತಿ ಸೇವಾ ಪದಕ ಪುರಸ್ಕೃತ ಡಿವೈಎಸ್ಪಿ ಜಯರಾಜ್‌ಗೆ ಅಭಿನಂದನೆಗಳ ಮಹಾಪೂರ



ದಾವಣಗೆರೆ, ಮಾ.2- 2025ನೇ ಸಾಲಿನ ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕ ಪಡೆದ ಹಾಗೂ ಇತ್ತೀಚೆಗಷ್ಟೇ ಡಿವೈಎಸ್ಪಿ ಪದೋನ್ನತಿ ಪಡೆದ ಪೊಲೀಸ್ ಇನ್‌ಸ್ಪೆಕ್ಟರ್ ಹೆಚ್. ಜಯರಾಜ್ ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಸಾಹಿತಿಗಳೂ, ಜಯರಾಜ್ ಅವರ ನೆಚ್ಚಿನ ಶಿಕ್ಷಕರೂ ಆದ ಎಸ್. ಓಂಕಾರಯ್ಯ ಸಮಾರಂಭ ಉದ್ಘಾಟಿಸಿ ಮಾತನಾಡಿ, ಬೌದ್ಧಿಕವಾಗಿ ಶಿಷ್ಯರು ಗುರುಗಳನ್ನು ಮೀರಿಸಬೇಕು. ಈ ರೀತಿ ಗುರುವನ್ನು ಮೀರಿ ಬೆಳೆದ ಶಿಷ್ಯರನ್ನು ನೋಡಿದಾಗ ಗುರುವಿಗೆ ಹೆಮ್ಮೆಯಾಗುತ್ತದೆ ಎಂದರು.

ನನ್ನ ಅನೇಕ ಶಿಷ್ಯಂದಿರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಗುರುಗಳು ಕಂಡಾಗ ಆತ್ಮೀಯವಾಗಿ, ಗೌರವದಿಂದ ಮಾತನಾಡಿಸಿದಾಗ ಅದೇ ಶಿಷ್ಯರು ಗುರುವಿಗೆ ಕೊಡುವ ಕಾಣಿಕೆ ಇದ್ದಂತೆ ಎಂದರು.

ಪೊಲೀಸ್ ಕ್ಷೇತ್ರದಲ್ಲಿ ಜಯರಾಜ್ ಪ್ರಾಮಾಣಿಕ ಸೇವೆ ಸಲ್ಲಿಸಲಿ. ಉತ್ತಮ ಆರೋಗ್ಯ ಪದ್ಧತಿಯಿಂದ ನಿವೃತ್ತಿ ನಂತರವೂ ನೂರು ಕಾಲ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಹಾರೈಸಿದರು.

ಜಯರಾಜ್ ಅವರ ಸ್ನೇಹಿತ ಶೌಕತ್ ಅಲಿ ಕಿತ್ತೂರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಜಯರಾಜ್ ನೀರಿನಂತೆ. ನೀರು ಹೇಗೆ ಹೋದ ಕಡೆಯಲ್ಲಾ ಹೊಂದಿಕೊಳ್ಳುವುದೋ ಹಾಗೆಯೇ ಜಯರಾಜ್ ಎಲ್ಲರೊಂದಿಗೂ ಆತ್ಮೀಯವಾಗಿ ಬೆರೆಯುತ್ತಾರೆ. ಅವರ ಸಾಧನೆ ಸ್ನೇಹಿತ ವರ್ಗಕ್ಕೆ ಹೆಮ್ಮೆಯ ವಿಷಯ ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಹೆಚ್. ಸಂತೋಷ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಡಾ. ಹೆಚ್.ವಿ. ವಾಮದೇವಪ್ಪ, ನಿವೃತ್ತ ಉಪನ್ಯಾಸಕ ಪ್ರೊ.ಮಲ್ಲಿಕಾರ್ಜುನಪ್ಪ, ಉಪನ್ಯಾಸಕ ಗದಿಗೆಪ್ಪ ಪಿ., ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಿದ್ರಾಮ್ ಟಿ.ಸಿ., ಬೆಂಗಳೂರು ಪೊಲೀಸ್ ನಿರೀಕ್ಷಕರುಗಳಾದ ರಾಮಪ್ಪ ಬಿ.ಗುತ್ತೇರ, ದೇವೇಂದ್ರಪ್ಪ ಕೆ.ಎಸ್., ಮೈಕ್ರೋ ಲ್ಯಾಬ್ ಲಿಮಿಟೆಡ್ ಪ್ರಾದೇಶಿಕ ವ್ಯವಸ್ಥಾಪಕ ಸಂಪತ್‌ಗೌಡ ಬಿ.ಆರ್. ಇತರರು ಉಪಸ್ಥಿತರಿದ್ದರು.

# ಕೆಪಿಎಸ್‌ಸಿ ನೇಮಕಾತಿ ಅಧಿಸೂಚನೆ ರದ್ದತಿಗೆ ಆಗ್ರಹ



**ಕರ್ನಾಟಕ ರಕ್ಷಣಾ ವೇದಿಕೆಯಿಂದ ರಕ್ತಪತ್ರ ಚಳವಳಿ**

ದಾವಣಗೆರೆ, ಮಾ.2- ಕರ್ನಾಟಕ ಲೋಕಸೇವಾ ಆಯೋಗವು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಹೊರಡಿಸಿರುವ ಅಧಿಸೂಚನೆ ರದ್ದುಗೊಳಿಸಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರದಲ್ಲಿ ಭಾನುವಾರ ರಕ್ತಪತ್ರ ಚಳವಳಿ ನಡೆಸಿದರು.

ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ನೇತೃತ್ವದಲ್ಲಿ ಶಿವ ಹೈಟೆಕ್ ಲ್ಯಾಬ್ ಮುಂಭಾಗ ಜಮಾಯಿಸಿದ್ದ ಸಂಘಟನೆಯ ಕಾರ್ಯಕರ್ತರು, ಲ್ಯಾಬ್ ಸಿಬ್ಬಂದಿ ಸಹಾಯದಿಂದ ತಮ್ಮ ದೇಹದಿಂದ ತೆಗೆದ ರಕ್ತದಲ್ಲಿ 'ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎಂಬ ನಾನಾ ಘೋಷಣೆಗಳ ಒಕ್ಕಣೆ ಬರೆದು ಪತ್ರಗಳನ್ನು ಅಂಚೆ ಇಲಾಖೆ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳುಹಿಸಿದರು.

ಈ ವೇಳೆ ರಾಮೇಗೌಡ ಮಾತನಾಡಿ, ಇತ್ತೀಚೆಗೆ ಕೆಪಿಎಸ್‌ಸಿ ನಡೆಸಿದ 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಆಂಗ್ಲ ಭಾಷೆಯಲ್ಲಿದ್ದ ಪ್ರಶ್ನೆಗಳನ್ನು ಗೂಗಲ್ ಮೂಲಕ ಭಾಷಾಂತರ ಮಾಡಿ, ಕನ್ನಡದ ಪ್ರಶ್ನೆ ಪತ್ರಿಕೆಯಲ್ಲಿ ಅಸಂಬದ್ಧ ಪ್ರಶ್ನೆಗಳನ್ನು ಕೇಳಿದೆ. ಹೀಗಾಗಿ, ಈ ಪರೀಕ್ಷೆ ಎದುರಿಸಿದ ಸಾವಿರಾರು ಅಭ್ಯರ್ಥಿಗಳ ಬದುಕು ಮೂರಾಬಟ್ಟೆಯಾಗಿದೆ. ಆದ್ದರಿಂದ ಆ ಪರೀಕ್ಷೆಯ ಫಲಿತಾಂಶ ತಡೆ ಹಿಡಿದು ಹೊಸದಾಗಿ ಪರೀಕ್ಷೆ ನಡೆಸಬೇಕೆಂಬುದು ಕರವೇ ಒತ್ತಾಯಿಸಿತ್ತು. ಆದರೂ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಿಸಿರುವುದು ಖಂಡನೀಯ ಎಂದು ಗುಡುಗಿದರು.

ಕೆಪಿಎಸ್‌ಸಿಯಲ್ಲಿರುವ ಉತ್ತರ ಭಾರತದ ಅಧಿಕಾರಿಗಳು ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯುವುದು ಕಡ್ಡಾಯವಲ್ಲ ಎಂಬ ಅಧಿಸೂಚನೆ ಹೊರಡಿಸಿದ್ದು, ಇದು ಕನ್ನಡಿಗರ ಬದುಕು ಕಿತ್ತುಕೊಳ್ಳುವ ಹುನ್ನಾರವೇ ಆಗಿದೆ ಎಂದು ದೂರಿದರು.

ಈಗಾಗಲೇ ಬ್ಯಾಂಕು ಮತ್ತು ರೈಲ್ವೆ ಇಲಾಖೆಗಳಲ್ಲಿ ಉತ್ತರ ಭಾರತೀಯರು ತುಂಬಿಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿ ಪರೀಕ್ಷೆ ಕಡ್ಡಾಯವಲ್ಲ ಎನ್ನುವ ಅಧಿಕಾರಿಗಳು ಏಕೆ ಬೇಕು? ಕರ್ನಾಟಕದಲ್ಲಿಯೂ ಉತ್ತರ ಭಾರತಿಯರನ್ನು ತುಂಬುವುದಾದರೆ ಕೆಪಿಎಸ್‌ಸಿಯನ್ನೇ ಮುಚ್ಚಿ ಬಿಡಿ ಎಂದು ಆಕ್ರೋಶ ಹೊರಹಾಕಿದರು.

ತಹಶೀಲ್ದಾರ್, ಉಪವಿಭಾಗೀಯ ಅಧಿಕಾರಿಯಾಗಲು ಕೋಟ್ಯಂತರ ರೂಪಾಯಿ ಹಣ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಣ ಕೊಟ್ಟು ಹುದ್ದೆ ಗಿಟ್ಟಿಸಿಕೊಳ್ಳುವುದಾದರೆ ಓದು ಏಕೆ ಬೇಕು? ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಸಿಎಂ ಸಿದ್ದರಾಮಯ್ಯ ಮೌನ ವಹಿಸಿರುವುದು ಅನೇಕ ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ ಎಂದರು.

384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಪರೀಕ್ಷೆಯ ಫಲಿತಾಂಶ ತಡೆ ಹಿಡಿದು ಹೊಸದಾಗಿ ಪರೀಕ್ಷೆ ನಡೆಸಬೇಕು. ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಆರಂಭಿಸಿರುವ ಪ್ರಕ್ರಿಯೆ ನಿಲ್ಲಿಸಬೇಕು. ಕೆಪಿಎಸ್‌ಸಿಯಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯುವುದು ಕಡ್ಡಾಯವಲ್ಲ ಎಂಬುದಾಗಿ ಹೊರಡಿಸಿರುವ ಅಧಿಸೂಚನೆ ಹಿಂಪಡೆಯಬೇಕು. ಕನ್ನಡ ವಿರೋಧಿ ಆದೇಶ ಹೊರಡಿಸಿರುವ ಭ್ರಷ್ಟ ಅಧಿಕಾರಿಗಳನ್ನು ಅಮಾನತ್ತು ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕರವೇ ಪದಾಧಿಕಾರಿಗಳಾದ ಈಶ್ವರ್, ಬಸಮ್ಮ, ನಾಗಮ್ಮ, ಮಂಜುಳಾ ಮಾಂತೇಶ್, ಗಿರೀಶ್ ಕುಮಾರ್, ಖಾದರ್ ಬಾಷಾ, ಜಬೀವುಲ್ಲಾ, ಗೋಪಾಲ್ ದೇವರಮನೆ, ತನ್ವೀರ್, ಜಿ.ಎಸ್. ಸಂತೋಷ್, ನಾಗರಾಜ್, ಮಹೇಂದ್ರ, ಆಕಾಶ್, ಮೋಹನ್ ಹಾಗೂ ಇತರರು ಇದ್ದರು.

# ಕ್ಷಯ ರೋಗವನ್ನು ಶೀಘ್ರ ಚಿಕಿತ್ಸೆಯಿಂದ ನಿರ್ಮೂಲನೆ ಮಾಡಬಹುದು



**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ**

ದಾವಣಗೆರೆ, ಮಾ. 2- ಕ್ಷಯ ರೋಗವನ್ನು ಶೀಘ್ರವಾಗಿ ಪತ್ತೆ ಹಚ್ಚಿ ಶೀಘ್ರ ಚಿಕಿತ್ಸೆ ನೀಡುವ ಮೂಲಕ ನಿರ್ಮೂಲನೆ ಮಾಡಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ ತಿಳಿಸಿದರು.

ನೂರು ದಿನದ ಟಿಬಿ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಗಳ ಕಛೇರಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ ಹಾಗೂ ಸೂಯೇಜ್ ಫೌಂಡೇಷನ್ ಇಂಡಿಯಾ ವತಿಯಿಂದ ಪ್ರಧಾನಮಂತ್ರಿ ಕ್ಷಯ ಮುಕ್ತ ಭಾರತ ಅಭಿಯಾನ ದಡಿಯಲ್ಲಿ ಕ್ಷಯ ರೋಗಿಗಳಿಗೆ ಉಚಿತ ಪೌಷ್ಟಿಕ ಆಹಾರ ಕಿಟ್ ವಿತರಿಸಿ ಅವರು ಮಾತನಾಡಿದರು.

ನಿಕ್ಷಯ ಮಿತ್ರ ಕಾರ್ಯಕ್ರಮ ಯೋಜನೆಯಲ್ಲಿ ಸಮುದಾಯದ ಎಲ್ಲಾ ವರ್ಗದವರು ಕ್ಷಯ ರೋಗಿಗಳಿಗೆ ಪೌಷ್ಠಿಕ ಆಹಾರ ಅಥವಾ ಇನ್ನಿತರೆ ಸಹಾಯ ನೀಡಲು ಮುಂದಾಗುವ ಮೂಲಕ ಸಾರ್ವಜನಿಕ ಸಹಭಾಗಿತ್ವವನ್ನು ಬಯಸಲಾಗುತ್ತಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗಿಯಾದ ಸೂಯೇಜ್ ಫೌಂಡೇಷನ್ ಇಂಡಿಯಾ ವತಿಯಿಂದ ಉಚಿತ ಪೌಷ್ಟಿಕ ಆಹಾರ ಕಿಟ್‌ಗಳನ್ನು ನೀಡುತ್ತಿರುವುದು ಪ್ರಶಂಸನೀಯ ವಿಷಯ ಎಂದರು. ಇದೇ ರೀತಿ ಈಗಾಗಲೇ ಜೆಎಸ್‌ಡಬ್ಲ್ಯು ಕಂಪನಿಯು ಸಹ ಪೌಷ್ಠಿಕ ಆಹಾರ ಕಿಟ್ ನೀಡಿರುತ್ತದೆ ಎಂದು ತಿಳಿಸಿ, ಶೀಘ್ರವಾಗಿ ಕ್ಷಯ ರೋಗ ಪ್ರಕರಣ ಪತ್ತೆ ಹಚ್ಚುವುದು, ಚಿಕಿತ್ಸೆ ದೊರಕಿಸುವುದು ಗುಣ ಮುಖರನ್ನಾಗಿ ಮಾಡುವುದು ಈ ಕಾರ್ಯಕ್ರಮದ ಉದ್ದೇಶ ಎಂದು ಡಾ. ಷಣ್ಮುಖಪ್ಪ ತಿಳಿಸಿದರು.

ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ, ತಾಲ್ಲೂಕು ಆರೋಗ್ಯಾಧಿಕಾರಿ ಮಾತನಾಡಿ, ಈ ಆಂದೋಲನವು ಎಲ್ಲರ ಸಹಕಾರದಿಂದ 889 ದಿನ ಪೂರೈಸಿದೆ ಎಂದು ಹೇಳಿದರು.

ಸೂಯೇಜ್ ಫೌಂಡೇಷನ್ ಇಂಡಿಯಾ ವತಿಯಿಂದ ಆಗಮಿಸಿದ್ದ ಮುಖ್ಯಸ್ಥರಾದ ಸೋಮ ಶೇಖರ, ರಾಜೇಶ್, ಎಂ. ಕಿರಣ್, ಉಮಾ ಮಹೇಶ್‌ರಾವ್ ಮತ್ತಿತರರು ಉಪಸ್ಥಿತರಿದ್ದರು.



## ನಂದಿಹಳ್ಳಿ ಬಸವೇಶ್ವರ ಜಾತ್ರೆ

ರಾಣೇಬೆನ್ನೂರು, ಮಾ. 2- ಬಹುಜನರ ಆರಾಧ್ಯ ದೈವಗಳಲ್ಲಿ ಒಂದಾದ ತಾಲ್ಲೂಕಿನ ನಂದಿಹಳ್ಳಿ ಶ್ರೀ ಬಸವೇಶ್ವರ ಜಾತ್ರೆಯು ಇದೇ ದಿನಾಂಕ 7 ರಿಂದ 11ರವರೆಗೆ 5 ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ.

ದಿನಾಂಕ 7 ರಂದು ಕಂಕಣ ಧಾರಣೆ, 8 ರಂದು ಕಳಸ ಪೂಜೆ, 9 ರಂದು ಸಣ್ಣತೇರು, 10 ರಂದು ದೊಡ್ಡ ತೇರು ಹಾಗೂ 11ರಂದು ಓಕುಳಿ ನಡೆಯಲಿದೆ.

# ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿ ರಸಮಂಜರಿ ಕಾರ್ಯಕ್ರಮ



ದಾವಣಗೆರೆ, ಮಾ. 2 - 23ನೇ ವಾರ್ಡ್‌ನ ಎಂ.ಸಿ.ಸಿ. ಎ ಬ್ಲಾಕ್ ಬಕ್ಕೇಶ್ವರ ಹೈಸ್ಕೂಲ್ ಹತ್ತಿರದ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ನಡೆದ ಭಕ್ತಿ ಗಾನ ಸುಧೆ ರಸಮಂಜರಿ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಮರ್ಥ್ ಶಿವರಾತ್ರಿಯ ಶುಭಾಶಯ ಹೇಳಿದರು. ಮಾಜಿ ಉಪ ಮಹಾಪೌರ ಸೋಗಿ ಶಾಂತಕುಮಾರ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಸಾಗರ್ ಉಪಸ್ಥಿತರಿದ್ದರು.

ಈ ಕಾರ್ಯಕ್ರಮವನ್ನು ವರ್ತಕ ಮಾಗಾನಹಳ್ಳಿ ಗಿರೀಶ್ ಪ್ರಾಯೋಜಿಸಿದ್ದರು. ಪ್ರಸನ್ನಕುಮಾರ್, ಹರೀಶ್, ಹನುಮಂತು, ಮಾಗಾನಹಳ್ಳಿ ಯುವರಾಜ್, ಗಿರೀಶ್, ಸಮೀರ್, ಅಭಿಷೇಕ್, ರಂಜಿತ್, ಸಂತೋಷ್, ಹಾಲೇಶ್, ಪವನ, ಕಿರಣ್, ಅರವಿಂದ್, ನಿಧಿರಾಜ್, ವಿನಾಯಕ ಮತ್ತು ಇತರರು ಭಾಗವಹಿಸಿದ್ದರು.

# ನಮನ ಅಕಾಡೆಮಿಯ 'ಶಿವ ಸ್ಮರಣೆ ನೃತ್ಯ ಜಾಗರಣೆ'



ದಾವಣಗೆರೆ, ಮಾ. 2 - ಶಿವರಾತ್ರಿ ಪ್ರಯುಕ್ತ ನಮನ ಅಕಾಡೆಮಿಯು ಆಯೋಜಿಸಿದ್ದ 'ಶಿವ ಸ್ಮರಣೆ ನೃತ್ಯ ಜಾಗರಣೆ' ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು. ನಗರದ ನಾಲ್ಕು ದೇವಾಲಯಗಳಲ್ಲಿ ನಡೆದ ಈ ಕಾರ್ಯಕ್ರಮದ ಉದ್ಘಾಟನೆಯು ವರ್ತುಲ ರಸ್ತೆಯ ಶಾರದಾ ಮಂದಿರದಲ್ಲಿ ನೆರವೇರಿತು.

ಉದ್ಘಾಟನಾ ಸಮಾರಂಭವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ರವಿಚಂದ್ರ, ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್ ಹಾಗೂ ವೇದಬ್ರಹ್ಮ ಶಂಕರನಾರಾಯಣ ಶಾಸ್ತ್ರಿಗಳು ನೆರವೇರಿಸಿದರು.

ನೃತ್ಯ ಜಾಗರಣೆಯು ರಾತ್ರಿ 9.30 ಗಂಟೆಗೆ ಶಾರದಾ ಮಂದಿರದಲ್ಲಿ ಪ್ರಾರಂಭವಾಗಿ ನಂತರ ಲಿಂಗೇಶ್ವರ ದೇವಸ್ಥಾನ, ತದನಂತರ ಕೂಡಲಿ ಶಂಕರ ಮಠ, ಅಂತಿಮ ವಾಗಿ ವಿದ್ಯಾನಗರದ ಶಿವ-ಪಾರ್ವತಿ ದೇವಸ್ಥಾನದಲ್ಲಿ ಬೆಳಗಿನ ಜಾವ 4 ಗಂಟೆಯವರೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಿದ ಪ್ರಥಮ ನೃತ್ಯ ಗಣೇಶ ಸ್ತುತಿಯಲ್ಲಿ ಗಣೇಶನ ಮಹಿಮೆ ಹಾಗೂ ಎಲ್ಲಾ ದೇವತೆಗಳಿಂದ ಅವನ ಆರಾಧನೆಯನ್ನು ಈ ನೃತ್ಯ ರೂಪದಲ್ಲಿ ತೋರಿಸಲಾಯಿತು.

ಐದನೇ ವರ್ಷದ ನೃತ್ಯ ಜಾಗರಣೆಗೆ ವಿಶೇಷವಾಗಿ ಸಂಯೋಜಿಸಲಾದ 14 ನಿಮಿಷಗಳ ವರ್ಣಂ, ಭರತನಾಟ್ಯ, ಮಾರ್ಗಂನ ಪ್ರಮುಖ ಹಂತವಾಗಿದ್ದು, ಗಂಗಾ ವರ್ಣಂ ಗಂಗೆಯ ಪವಿತ್ರತೆ, ವಾಮನ ಅವತಾರದ ಸಂದರ್ಭದಲ್ಲಿನ ಗಂಗೆಯ ಉದ್ಭವ ಹಾಗೂ ಸಗರ ರಾಜನ 60,000 ಪುತ್ರರ ವಿಮೋಚನೆಗೆ ಗಂಗೆಯ ಉದ್ಭವಕ್ಕೆ ಸಂಬಂಧಿಸಿದ ಪ್ರಸಂಗಗಳನ್ನು ನೃತ್ಯ ರೂಪದಲ್ಲಿ ಪ್ರದರ್ಶಿಸಲಾಯಿತು.

ಕಪಾಲಿನಿ ನೃತ್ಯದಲ್ಲಿ ಶಿವನ ರೌದ್ರಾವತಾರ, ವಿಷಪಾನ ಹಾಗೂ ಮಾರ್ಕಂಡೇಯನ ಭಕ್ತಿಗೆ ಮೆಚ್ಚಿ ಅವನಿಗೆ ಶಿವನ ಆಶೀರ್ವಾದ ದೊರಕುವ ದೃಶ್ಯಗಳನ್ನು ಅಭಿನಯಿಸಲಾಯಿತು. ಅರ್ಧನಾರೀಶ್ವರ ಪ್ರಸ್ತುತಿಯಲ್ಲಿ ಶಿವ-ಪಾರ್ವತಿಯ ಸಮತ್ವವನ್ನು ಪ್ರತಿಪಾದಿಸುವ ಅರ್ಧನಾರೀಶ್ವರ ನೃತ್ಯಬಂಧ ಪ್ರಸ್ತುತವಾಯಿತು.

ಈ ಎಲ್ಲಾ ನೃತ್ಯ ಪ್ರಸ್ತುತಿಗಳನ್ನು ನಮನ ಅಕಾಡೆಮಿಯ 10 ವಿದ್ಯಾರ್ಥಿಗಳು ಹಾಗೂ ವಿದುಷಿ ಶ್ರೀಮತಿ ಡಿ.ಕೆ. ಮಾಧವಿ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ನಿರೂಪಣೆಯನ್ನು ಅಕಾಡೆಮಿಯ ಅಧ್ಯಕ್ಷ ಗೋಪಾಲಕೃಷ್ಣ ವಹಿಸಿದ್ದರು. ಅಕಾಡೆಮಿಯ ನಿರ್ದೇಶಕ ಅನಿಲ್ ಬಾರೆಂಗಳ್ ಸ್ವಾಗತಿಸಿದರು. ನಿರ್ದೇಶಕ ಪಿ.ಸಿ. ರಾಮನಾಥ್ ವಂದಿಸಿದರು. ನೃತ್ಯ ಪ್ರಸ್ತುತಿಗಳ ನಿರೂಪಣೆಯನ್ನು ಕು. ಯುಕ್ತ ಎಸ್. ಕಠಾರೆ ಮನೋಜ್ಞವಾಗಿ ನಡೆಸಿಕೊಟ್ಟರು.

# ನಗರದಲ್ಲಿ ಇಂದು ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನೂತನ ಕಟ್ಟಡದ ಶಂಕುಸ್ಥಾಪನೆ

ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ ಸ್ವಂತ ಕಟ್ಟಡ ಹೊಂದುವ ನಿಟ್ಟಿನಲ್ಲಿ ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್‌ನಲ್ಲಿರುವ ಪೊಲೀಸ್ ಭವನದ ಎದುರು ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಂಡಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ಮತ್ತು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಗೋಪಾಲರಾವ್ ಮಾನೆ ಅವರ ಅಧ್ಯಕ್ಷತೆ ಹಾಗೂ ಉಪಾಧ್ಯಕ್ಷ ಗಿರಿಧರ್ ಡಿ. ಮೆಹರ್ವಾಡೆ ಅವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಶಂಕುಸ್ಥಾಪನೆಯ ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ.

ಮರಾಠ ಸಮಾಜದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್, ಮಾರಾಠ ಸಮಾಜದ ಅಧ್ಯಕ್ಷ ಮಾಲತೇಶರಾವ್ ಜಾಧವ್, ಎಸ್.ಎಸ್.ಕೆ. ಸಮಾಜದ ಅಧ್ಯಕ್ಷ ಮಲ್ಲರಸಾ ಆರ್. ಕಾಟ್ವೆ, ಹಿರಿಯ ಲೆಕ್ಕಪರಿಶೋಧಕ ಎ. ಕಿರಣ್ ಕುಮಾರ್, ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಜಿ.ಪಿ. ಮೋಹನ್, ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಂ.ಎಸ್. ವಿಠಲ್ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ಶಾಸಕರಿಂದ ಕಾಮಗಾರಿಗೆ ಭೂಮಿ ಪೂಜೆ



**ಹರಪನಹಳ್ಳಿ**

ಹರಪನಹಳ್ಳಿ, ಮಾ.2- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ತಾಲ್ಲೂಕಿನ ಕಡಬಗೆರೆ, ಮಾಡ್ಲಗೆರೆ ಮತ್ತು ನಿಚ್ಚವ್ವನಹಳ್ಳಿ ಗ್ರಾಮಗಳಲ್ಲಿ ತಲಾ 60 ಲಕ್ಷ ರೂ.ಗಳಲ್ಲಿ ಮಂಜೂರಾದ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ನೂತನ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಕಾರ್ಯವನ್ನು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ನೆರವೇರಿಸಿದರು.

ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಬೇರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


**ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ವಿಜಯಲಕ್ಷ್ಮಿರೋಡ್ (ಶಾಖೆ), ದಾವಣಗೆರೆ-577 001.

ಆವರಗೊಳ್ಳ ಪುರವರ್ಗ ಹಿರೇಮಠದ
ಶ್ರೀ ಷ॥ ಬ್ರ॥ ಓಂಕಾರ ಶಿವಾಚಾರ್ಯ ಸ್ವಾಮಿಗಳವರ ಸಾನ್ನಿಧ್ಯದಲ್ಲಿ

**ಬ್ಯಾಂಕಿನ ನೂತನ ಕಟ್ಟಡದ ಶಂಕುಸ್ಥಾಪನೆ**

ದಿನಾಂಕ : 03 ಮಾರ್ಚ್ 2025 ಸೋಮವಾರ
ಸಮಯ : ಬೆಳಿಗ್ಗೆ 11 ಗಂಟೆಯಿಂದ 12 ಘಂಟೆಯವರೆಗೆ ಸಲ್ಲುವ ಶುಭ ಮೂಹೂರ್ತದಲ್ಲಿ
ಸ್ಥಳ : ಡೋರ್ ನಂ.1, ಡಿ. ದೇವರಾಜ ಅರಸು ಬಡಾವಣೆ, 'ಬಿ' ಬ್ಲಾಕ್, ಪೊಲೀಸ್ ಭವನದ ಎದುರು, ಆರ್.ಟಿ.ಓ ಆಫೀಸ್ ಹತ್ತಿರ, ರಿಂಗ್ ರೋಡ್, ದಾವಣಗೆರೆ.

ಶಂಕುಸ್ಥಾಪನೆ :
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಸನ್ಮಾನ್ಯ ಶ್ರೀಮತಿ ಡಾ॥ ಪ್ರಭಾ ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರು, ದಾವಣಗೆರೆ ಕ್ಷೇತ್ರ

ಅಧ್ಯಕ್ಷತೆ :
ಶ್ರೀ ಗೋಪಾಲ್‌ರಾವ್ ಮಾನೆ, ಬ್ಯಾಂಕಿನ ಅಧ್ಯಕ್ಷರು
ಶ್ರೀ ಗಿರಿಧರ್ ಡಿ. ಮೆಹರ್‌ವಾಡೆ, ಬ್ಯಾಂಕಿನ ಉಪಾಧ್ಯಕ್ಷರು

ಮುಖ್ಯ ಅತಿಥಿಗಳು :
- ಸನ್ಮಾನ್ಯ ಶ್ರೀ ಯಶವಂತರಾವ್ ಜಾಧವ್, ಮರಾಠ ಸಮಾಜದ ಗೌರವಾಧ್ಯಕ್ಷರು, ಬ್ಯಾಂಕಿನ ಮಾಜಿ ಅಧ್ಯಕ್ಷರು
- ಸನ್ಮಾನ್ಯ ಶ್ರೀ ಮಾಲತೇಶ್‌ರಾವ್ ಡಿ. ಜಾಧವ್, ಮರಾಠ ಸಮಾಜದ ಅಧ್ಯಕ್ಷರು, ಬ್ಯಾಂಕಿನ ಮಾಜಿ ಅಧ್ಯಕ್ಷರು
- ಸನ್ಮಾನ್ಯ ಶ್ರೀ ಮಲ್ಲಾರಸಾ ಆರ್. ಕಾಟ್ವೆ, ಎಸ್.ಎಸ್.ಕೆ. ಸಮಾಜದ ಅಧ್ಯಕ್ಷರು, ಬ್ಯಾಂಕಿನ ಮಾಜಿ ಅಧ್ಯಕ್ಷರು
- ಸನ್ಮಾನ್ಯ ಶ್ರೀ ಎ. ಕಿರಣ್ ಕುಮಾರ್, ಚಾರ್ಟರ್ಡ್ ಅಕೌಂಟೆಂಟ್, ಬ್ಯಾಂಕಿನ ಮಾಜಿ ಅಧ್ಯಕ್ಷರು
- ಸನ್ಮಾನ್ಯ ಶ್ರೀ ಮೋಹನ್ ಜಿ.ಪಿ. ಸ್ವಕುಳಸಾಳಿ ಸಮಾಜದ ಅಧ್ಯಕ್ಷರು, ದಾವಣಗೆರೆ
- ಸನ್ಮಾನ್ಯ ಶ್ರೀ ಎಂ.ಎಸ್. ವಿಠ್ಠಲ್, ನಾಮದೇವ ಸಿಂಪಿ ಸಮಾಜದ ಅಧ್ಯಕ್ಷರು, ಬ್ಯಾಂಕಿನ ಮಾಜಿ ಉಪಾಧ್ಯಕ್ಷರು

ಬ್ಯಾಂಕಿನ ಪರವಾಗಿ
ಶ್ರೀ ಗೋಪಾಲ್‌ರಾವ್ ಮಾನೆ, ಅಧ್ಯಕ್ಷರು
ಶ್ರೀ ಗಿರಿಧರ್ ಡಿ. ಮೆಹರ್ವಾಡೆ, ಉಪಾಧ್ಯಕ್ಷರು

ನಿರ್ದೇಶಕರುಗಳು
- ಶ್ರೀ ಸತ್ಯನಾರಾಯಣ ಆರ್.ಜಿ.
- ಶ್ರೀ ಬಾಬುರಾವ್ ಸಾಳಂಕಿ ಎಸ್.
- ಶ್ರೀ ಆನಂದ್ ಡಿ. ಸಫಾರೆ
- ಶ್ರೀ ಗಣೇಶ ಪಿ. ಕ್ಷೀರಸಾಗರ
- ಶ್ರೀ ಮಧುಕರ್ ಎಸ್.ಕೆ.
- ಶ್ರೀ ಮನೋಹರ್ ವಿ.
- ಶ್ರೀ ವಿಠ್ಠಲ್ ಆರ್.
- ಶ್ರೀ ಬಾಬು
- ಶ್ರೀಮತಿ ಡಾ. ರಜನಿ ಎಸ್.
- ಶ್ರೀ ರಾಜು ಎಲ್. ಬದ್ದಿ
- ಶ್ರೀ ಯಲ್ಲಪ್ಪ ಜಿ.
- ಶ್ರೀಮತಿ ಅನಿತಾಬಾಯಿ ಮಾಲತೇಶ್‌ರಾವ್
- ಶ್ರೀಮತಿ ರೇಣುಕಾಬಾಯಿ
- ಶ್ರೀ ಎ.ಸಿ. ರಾಘವೇಂದ್ರ ಮೊಹರೆ, ವಕೀಲರು, ವೃತ್ತಿಪರ ನಿರ್ದೇಶಕರು
- ಶ್ರೀ ರಾಜು ಮಹೇಂದ್ರಕರ್ ವಿ. ಚಾರ್ಟರ್ಡ್ ಅಕೌಂಟೆಂಟ್, ವೃತ್ತಿಪರ ನಿರ್ದೇಶಕರು

ಇಂಜಿನಿಯರ್: • ಶ್ರೀ ಅರವಿಂದ್ ಎಲ್. ಬದ್ದಿ ಮತ್ತು ಶ್ರೀ ಸುಮಂತರಾವ್ ಎಂ.ಜಿ.
ಸಿಬ್ಬಂದಿಗಳು : • ಶ್ರೀ ನಾಗರಾಜ್ ಗೌಡನಕಟ್ಟೆ, ವ್ಯವಸ್ಥಾಪಕರು • ಶ್ರೀ ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು • ಶ್ರೀಮತಿ ಮಂಜುಳ ಎಂ.ಸಿ., ಲೆಕ್ಕಾಧಿಕಾರಿಗಳು • ಶ್ರೀ ನವೀನ್‌ಕುಮಾರ್ ಎಂ. ಲೆಕ್ಕಾಧಿಕಾರಿಗಳು • ಶ್ರೀ ವಿನಾಯಕ್ ಎನ್. ಕಾಟ್ವೆ, ಕ್ಯಾಷಿಯರ್
ಸಹಾಯಕರು: • ಶ್ರೀ ಸುಜಿತ್ ಕಾಟ್ವೆ • ಶ್ರೀ ಅಂಕುಶ ಕೆ.ಟಿ. • ಶ್ರೀ ಕಿರಣ್ ಚವ್ಹಾಣ್ ವೈ. • ನಿರ್ಮಲ, ಸೇವಕರು
ಲೋನ್ ರಿಕವರಿ ಅಧಿಕಾರಿಗಳು: • ಶ್ರೀ ದೇವೇಂದ್ರರಾವ್ ಎಂ.
ನಿತ್ಯನಿಧಿ ಸಂಗ್ರಹಕಾರರು: • ಶ್ರೀ ರಾಘವೇಂದ್ರ ಕೆ. • ಶ್ರೀ ಮಹೇಶ್ ಕೆ. ಸೊಳಂಕಿ • ಶ್ರೀ ಗಣೇಶ್‌ರಾವ್ ಪವಾರ್ • ಶ್ರೀ ಹನುಮಂತಪ್ಪ ಆರ್.

**ಸರ್ವ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಗ್ರಾಹಕರಿಗೂ ಆದರದ ಸ್ವಾಗತ**


# ಕೈದಾಳೆ ಗ್ರಾಮದಲ್ಲಿ ನಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಕೈದಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವವು ನಾಳೆ ಮಂಗಳವಾರ ನೆರವೇರಲಿದೆ.

ಇಂದು ಬೆಳಿಗ್ಗೆ 7-30 ರಿಂದ ಗಜ ಉತ್ಸವದೊಂದಿಗೆ ಬನ್ನಿ ಮಂಟಪ ಪೂಜೆ ನಡೆಯಲಿದೆ. ರಾತ್ರಿ 10-30ಕ್ಕೆ ರಥದ ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮವಿದ್ದು, ರಾತ್ರಿ 11 ಗಂಟೆಗೆ ರಥಕ್ಕೆ ಅರಿಶಿಣ ಎಣ್ಣೆ ಧಾರಣೆ ಮಾಡಲಾಗುವುದು.

ನಾಳೆ ಮಂಗಳವಾರ ಬೆಳಿಗ್ಗೆ 7.45 ರಿಂದ 8.15 ರ ವರೆಗೆ ಮಹಾರಥೋತ್ಸವವನ್ನು ನೆರವೇರಿಸಲಾಗುವುದು. ಮಧ್ಯಾಹ್ನ 1 ರಿಂದ ಸಂಜೆ 5 ರವರೆಗೆ ಜವಳ ಕಾರ್ಯಕ್ರಮ ನಡೆಯಲಿದೆ.


**ವಾಣಿಜ್ಯ ಸಂಕೀರ್ಣ ಬಾಡಿಗೆಗೆ ಇದೆ**

ನಗರದ ಎಂ.ಸಿ.ಸಿ 'ಬಿ' ಬ್ಲಾಕ್‌ನಲ್ಲಿ ರಿಲಯನ್ಸ್ ಸ್ಮಾರ್ಟ್ ಹಾಗೂ ಪವಾರ್ ಹೋಟೆಲ್ ಮಧ್ಯದ, 40 ಅಡಿ ರಸ್ತೆಗೆ ಅಂಟಿಕೊಂಡಿರುವ 6800 ಚದರ ಅಡಿ ವಾಣಿಜ್ಯ (ನೆಲಮಳಿಗೆ ಹಾಗೂ ಮೇಲ್ಭಾವಣಿ ಸೇರಿ 5 ಅಂತಸ್ತು , lift ಸೌಲಭ್ಯ ವಿರುವ) ಸಂಕೀರ್ಣ ಬಾಡಿಗೆಗೆ ಇದೆ. ಸಂಪೂರ್ಣ ಸಂಕೀರ್ಣ ಬಾಡಿಗೆಗೆ ತೆಗೆದುಕೊಳ್ಳುವವರಿಗೆ ಮೊದಲ ಆದ್ಯತೆ.

ಸಂಪರ್ಕಿಸಿ: 94805 51555



## ನಗರದಲ್ಲಿ ಸಂಭ್ರಮದ ಮಾರ್ಕಂಡೇಶ್ವರ ಸ್ವಾಮಿ ಬೆಳ್ಳಿ ರಥೋತ್ಸವ

ದಾವಣಗೆರೆ, ಮಾ. 2- ಮಹಾಶಿವರಾತ್ರಿಯ ಮರುದಿನ ನಗರದ ಎಸ್‌ಕೆಪಿ ರಸ್ತೆಯಲ್ಲಿ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದಿಂದ ಶ್ರೀ ಮಾರ್ಕಂಡೇಶ್ವರ ಸ್ವಾಮಿಯ ಬೆಳ್ಳಿ ರಥೋತ್ಸವ ಅದ್ದೂರಿಯಾಗಿ ನೆರವೇರಿತು. ದೇವಸ್ಥಾನದ ಎದುರಿನಿಂದ ಆರಂಭವಾದ ಬೆಳ್ಳಿ ರಥೋತ್ಸವವು, ರಾಜ ಬೀದಿಗಳಲ್ಲಿ ಸಂಚರಿಸಿ, ಮರಳಿ ದೇವಸ್ಥಾನಕ್ಕೆ ಆಗಮಿಸಿತು. ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಬೊಮ್ಮತಿಪ್ಪೇಸ್ವಾಮಿ (ಎಸ್‌ಟಿಪಿ), ಸತ್ಯನಾರಾಯಣ ಶೇಪೂರ್, ನಿಂಗಪ್ಪ ಅರಣಿ, ಬಿ.ಎಸ್.ಕೆ. ಪರಶುರಾಮ್, ಟಿ.ಎಸ್. ರವಿಕುಮಾರ್, ಮಂಜುನಾಥ್, ಸಂಗಪ್ಪ, ನಂದಿಗಾವಿ ಪರಶುರಾಮ್ ಮತ್ತಿತರರಿದ್ದರು.

# ಶಿವಧ್ಯಾನ ಮಂದಿರದಲ್ಲಿ ಮನಸೂರೆಗೊಂಡ ಭಕ್ತಿ ಗಾನಸುಧೆ

### ಅರ್ಚನ ಉಡುಪ ಹಾಗೂ ತಂಡದವರಿಂದ ನಡೆದ ಭಕ್ತಿ ಮಂಜರಿ ಕಾರ್ಯಕ್ರಮ

ದಾವಣಗೆರೆ, ಮಾ.2- ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಸ್ಥಳೀಯ ಬಿಐಇಟಿ ಕಾಲೇಜಿನ ಆವರಣದಲ್ಲಿರುವ ಶಿವಧ್ಯಾನ ಮಂದಿರದ ಆವರಣದಲ್ಲಿ ಹೆಸರಾಂತ ಹಿನ್ನೆಲೆ ಗಾಯಕರಾದ ಶ್ರೀಮತಿ ಅರ್ಚನ ಉಡುಪ ಹಾಗೂ ತಂಡದವರಿಂದ ನಡೆದ ಭಕ್ತಿ - ಮಂಜರಿ ಕಾರ್ಯಕ್ರಮ ಜನಮನಸೂರೆಗೊಂಡಿತು.

ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಶಿವಧ್ಯಾನ ಮಂದಿರಕ್ಕೆ ಭೇಟಿ ನೀಡಿ ಭಕ್ತಿ ಸಮರ್ಪಿಸಿದರು. ನಂತರ ಭಕ್ತಿ ಮಂಜರಿ ಕಾರ್ಯಕ್ರಮವನ್ನು ನಡೆಸಿಕೊಟ್ಟ ಅರ್ಚನಾ ಉಡುಪ ತಂಡದವರಿಗೆ ಸನ್ಮಾನಿಸಿ, ಗೌರವಿಸಿದರು.

ಸಂಗೀತದ ಮೂಲಕ ಅರ್ಥಪೂರ್ಣ ಮಹಾಶಿವರಾತ್ರಿ ಆಚರಣೆ ಇಲ್ಲಿ ನಡೆದಿದೆ. ಸುಮಾರು ಮೂರುವರೆ ಗಂಟೆಗಳ ಕಾಲ ಭಕ್ತಿಗೀತೆಗಳ ಮೂಲಕ ಅರ್ಚನ ಉಡುಪ



ಮತ್ತು ತಂಡದವರು ಭಕ್ತಿಯ ಗಾನಸುಧೆಯೊಂದಿಗೆ ಭಾವನಾತ್ಮಕ ಮತ್ತು ಅಧ್ಯಾತ್ಮಿಕ ಅನುಭವ ನೀಡಿದ್ದಾರೆಂದು ಶ್ಲಾಘಿಸಿದರು.

ತಂಡದವರ ಅತ್ಯಂತ ಶ್ರದ್ಧೆ ಮತ್ತು ತನ್ಮಯತೆಯ ಗಾಯನ ದೈವೀಕ ಲೋಕದ ಅನುಭವ ನೀಡಿದೆ. ಶಿವಧ್ಯಾನ ಮಂದಿರದಲ್ಲಿ ಸಂಗೀತ ಲೋಕವೇ ಸೃಷ್ಟಿಯಾಗಿತ್ತು ಎಂದಿದ್ದಾರೆ. ಈ ವೇಳೆ ಆನಂದ ಪರಮಾನಂದ, ವರಕವಿ ದ.ರಾ ಬೇಂದ್ರೆಯವರ ಕುರುಡು ಕಾಂಚಾಣ, ಶಿವಶಿವ ಎಂದರೆ ಭಯವಿಲ್ಲ, ನೀಡು ಶಿವ ನೀಡದಿರು ಶಿವ ಹಾಗೂ ಸತ್ಯಂ ಶಿವಂ ಸುಂದರಂ ಸೇರಿದಂತೆ ಭಕ್ತಿಗೀತೆಗಳ ಗಾಯನ ಜರುಗಿತು.

ವಿಶೇಷವಾಗಿ ಬಾಪೂಜಿ ವಿದ್ಯಾ ಸಂಸ್ಥೆ ನಿರ್ದೇಶಕರಾದ ಸಂಪನ್ ಮುತಾಲಿಕ್ ಅವರು ಪ್ರಸ್ತುತ ಪಡಿಸಿದ ಜಾನಪದ ಸಂಗೀತ ಜನಮನಸೆಳೆಯಿತು.

ಈ ಸಂದರ್ಭದಲ್ಲಿ ವೀರೇಶ್ ಪಾಟೀಲ್ ಸೇರಿದಂತೆ ಅನೇಕರಿದ್ದರು.

# ಸೆಬಿ ಮಾಜಿ ಮುಖ್ಯಸ್ಥೆ ಮಾಧಬಿ ವಿರುದ್ಧ ಎಫ್‌ಐಆರ್‌ಗೆ ಆದೇಶ

### ಷೇರುಪೇಟೆ ವಂಚನೆ

ಮುಂಬೈ, ಮಾ. 2 – ಷೇರು ಮಾರುಕಟ್ಟೆ ವಂಚನೆ ಹಾಗೂ ನಿಯಂತ್ರಣಗಳ ಉಲ್ಲಂಘನೆ ಆರೋಪದ ಮೇಲೆ ಸೆಬಿ ಮಾಜಿ ಅಧ್ಯಕ್ಷೆ ಮಾಧಬಿ ಬುಚ್ ಹಾಗೂ ಇತರೆ ಐವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಿಶೇಷ ನ್ಯಾಯಾಲಯ ನಿರ್ದೇಶನ ನೀಡಿದೆ.

ನಿಯಂತ್ರಣ ಲೋಪ ಹಾಗೂ ಶಾಮೀಲಾತಿಗಳು ಮೇಲ್ನೋಟಕ್ಕೆ ಕಂಡುಬರುತ್ತಿವೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆಯ ಅಗತ್ಯವಿದೆ ಎಂದು ಎಸಿಬಿ ವಿಶೇಷ ನ್ಯಾಯಾಧೀಶ ಶಶಿಕಾಂತ್ ಏಕನಾಥರಾವ್ ಬಂಗೇರ ನಿರ್ದೇಶನ ನೀಡಿದ್ದಾರೆ.

ಕಾನೂನು ಜಾರಿ ಸಂಸ್ಥೆಗಳು ಹಾಗೂ ಸೆಬಿ ನಿಷ್ಕ್ರಿಯತೆ ಕುರಿತು ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಕುರಿತ ತನಿಖೆಯ ಮೇಲೆ ನ್ಯಾಯಾಲಯ ನಿಗಾ ವಹಿಸಲಿದೆ ಹಾಗೂ 30 ದಿನಗಳಲ್ಲಿ ಪ್ರಕರಣದ ಪ್ರಗತಿ ಕುರಿತು ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

ಈ ಆದೇಶದ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ನಿಯಂತ್ರಣ ಕ್ರಮಗಳಿಗೆ ಬದ್ಧವಾಗಿರಲಾಗುವುದು ಎಂದು ಸೆಬಿ ತಿಳಿಸಿದೆ.

ದೊಡ್ಡ ಪ್ರಮಾಣದಲ್ಲಿ ಹಣಕಾಸು ವಂಚನೆ, ನಿಯಂತ್ರಣ ಉಲ್ಲಂಘನೆ ಹಾಗೂ ಭ್ರಷ್ಟಾಚಾರ ನಡೆದಿದೆ ಎಂದು ಸಪನ್ ಶ್ರೀವಾಸ್ತವ ಎಂಬುವವರು ದೂರು ದಾಖಲಿಸಿದ್ದರು.

ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಹಾಗೂ ನಿಯಂತ್ರಣ ಸಂಸ್ಥೆಗಳಲ್ಲಿ ಹಲವು ಬಾರಿ ದೂರು ಸಲ್ಲಿಸಲಾಗಿತ್ತು. ಆದರೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಅವರು ಕೋರ್ಟ್ ಮೊರೆ ಹೋಗಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸೆಬಿ, ಎಸಿಬಿ ನ್ಯಾಯಾಲಯದ ಎದುರು ದುರುದ್ದೇಶದ ಅರ್ಜಿ ಸಲ್ಲಿಸಲಾಗಿದೆ.

ದೂರು ಎದುರಿಸುತ್ತಿರುವವರು ಆ ಸಂದರ್ಭದಲ್ಲಿ ಅಧಿಕಾರದಲ್ಲಿ ಇರಲಿಲ್ಲ. ಈ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

# ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರಾಗಿ ಹಿರಿಯ ನ್ಯಾಯವಾದಿ ಮಿಟ್ಟಲಕೋಡ್



ದಾವಣಗೆರೆ, ಮಾ. 2 - ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರಾಗಿ ರಾಜ್ಯ ಬಿಜೆಪಿ ಕಾನೂನು ಪ್ರಕೋಷ್ಠದ ಮಾಜಿ ಸಂಚಾಲಕರೂ, ವಕೀಲರೂ ಆದ ಎಸ್. ಎಸ್. ಮಿಟ್ಟಲಕೋಡ್ ಅವರು ಆಯ್ಕೆಯಾಗಿದ್ದಾರೆ.

ಮಿಟ್ಟಲಕೋಡ್ ಅವರನ್ನು ಅಭಿನಂದಿಸಿ, ಜಿಲ್ಲಾ ವಕೀಲರ ಸಂಘದ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ವಕೀಲರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಹಾಗೂ ಜಿಲ್ಲಾ ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಹೆಚ್. ದಿವಾಕರ್, ಸಹಕಾರ ಸಂಘದ ನಿರ್ದೇಶಕ ಎ.ಸಿ. ರಾಘವೇಂದ್ರ, ಅಧಿವಕ್ತ ಪರಿಷತ್ತಿನ ಅಧ್ಯಕ್ಷ ಎಲ್. ದಯಾನಂದ, ಮನೋಜ್ ಕುಮಾರ್, ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್, ವೆಂಕಟೇಶ್, ಪಿ.ವಿ. ಶಿವಕುಮಾರ್, ರಾಘವೇಂದ್ರ ಶೆಟ್ಟಿ, ನಾಗರಾಜ್ ನಾಯ್ಕ, ಮೇಘರಾಜ, ಸಿದ್ದಪ್ಪ ಇನ್ನು ಮುಂತಾದ ವಕೀಲರು ಹಾಜರಿದ್ದರು.

## ಹಂಪಿ ಉತ್ಸವ : ಚಿರಂತನ ನೃತ್ಯ ಪ್ರದರ್ಶನ




ವಿಜಯನಗರ, ಮಾ. 2 - ಗತಕಾಲದ ವೈಭವವನ್ನು ಮರು ಜೀವಿಸುವ ಕಾರ್ಯಕ್ರಮ 'ಹಂಪಿ ಉತ್ಸವ-2025'ದಲ್ಲಿ ದಾವಣಗೆರೆಯ ಸಾಂಸ್ಕೃತಿಕ ಸಂಸ್ಥೆ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರ ಮನ ಗೆದ್ದಿತು.

ಡಿವಿಜಿಯವರ ಅಂತಃಪುರ ಗೀತೆಗಳ ನಟನವಾಡಿದಳ್‌ಗೆ ನೃತ್ಯ ಸಂಯೋಜಿಸಲಾಗಿತ್ತು. ಶಾಸ್ತ್ರೀಯ ಹಾಗು ಸಮಕಾಲೀನ ನೃತ್ಯ ಶೈಲಿಯಲ್ಲಿ 'ಬಾರಿಸು ಕನ್ನಡ ಡಿಂಡಿಮವ' ಗೀತೆಗೆ ನೃತ್ಯ ಪ್ರದರ್ಶಿಸಲಾಯಿತು.

ಎಸ್. ಸುಚೇತ , ತನುಜ ಜಿ.ಸಿ. ಸೃಷ್ಟಿ ಪಾಟೀಲ್, ಎಂ. ಖುಷಿ, ಜಿ. ಸಮೀಕ್ಷಾ, ಜಿ.ಆರ್. ಸಾನಿಕ, ಆರ್.ಎಂ. ವೈಷ್ಣವಿ, ಕೆ. ಖುಷಿ, ಎಚ್. ಶ್ರೇಯಾ, ಶಾನ್ವಿಕಾ, ಎಮ್. ಆದ್ಯ ಒಳಗೊಂಡ ಚಿರಂತನ ತಂಡವು ಯಶಸ್ವಿಯಾಗಿ ನೃತ್ಯ ಪ್ರದರ್ಶನ ನಡೆಸಿಕೊಟ್ಟಿತು.

## ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ವಿಶೇಷ ಪೂಜೆ



ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಗಾನಯೋಗಿ ಲಿಂ. ಶ್ರೀ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 111ನೇ ಜನ್ಮದಿನೋತ್ಸವ ಅಂಗವಾಗಿ ಲಿಂ. ಹಾನಗಲ್ಲ ಶ್ರೀ ಗುರು ಕುಮಾರಸ್ವಾಮಿಗಳ, ಶ್ರೀ ಲಿಂ. ಪಂಚಾಕ್ಷರಿ ಗವಾಯಿಗಳ ಹಾಗೂ ಶ್ರೀ ಲಿಂ. ಪುಟ್ಟರಾಜ ಕವಿ ಗವಾಯಿಗಳವರ ಗದ್ದುಗೆಗೆ ರುದ್ರಾಭಿಷೇಕ ಹಾಗೂ ವಿಶೇಷ ಪೂಜೆ ಇಂದು ನಡೆಯಲಿದೆ. ಸದ್ಭಕ್ತರು ಪೂಜ್ಯರುಗಳ ಗದ್ದುಗೆಯ ದರ್ಶನ ಆಶೀರ್ವಾದ ಪಡೆದು ಪುನೀತರಾಗಲು ಶ್ರೀ ಗುರು ಪಂಚಾಕ್ಷರಿ ಗವಾಯಿಗಳವರ ಅಂಧರ ಶಿಕ್ಷಣ ಸಮಿತಿ (ಬಾಡಾ ಕ್ರಾಸ್) ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ತಿಳಿಸಿದ್ದಾರೆ.

## ನೀಲಾನಹಳ್ಳಿಯಲ್ಲಿ ಆಂಜನೇಯಸ್ವಾಮಿ ತೇರು, ಕಾರಣಿಕ



ದಾವಣಗೆರೆ, ಮಾ. 2 - ಇಲ್ಲಿಗೆ ಸಮೀಪದ ನೀಲಾನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 5 ರ ಬುಧವಾರ ಬೆಳಗ್ಗೆ ಶ್ರೀ ಸ್ವಾಮಿ ರಥೋತ್ಸವ ಹಾಗೂ ಸಂಜೆ ಕಾರಣಿಕ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

ನುಡಿದಂತೆ ನಡೆಯುವ ಸಾವಿರಾರು ವರ್ಷಗಳ ಇತಿಹಾಸವುಳ್ಳ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವ ಹಾಗೂ ಕಾರಣಿಕವು ಬಹಳ ಶ್ರದ್ಧಾ ಭಕ್ತಿಯಿಂದ ನಡೆಯಲಿದೆ. ಈ ಹಿಂದೆ ದೇವರ ಅಪ್ಪಣೆಯಾಗಿರುವಂತೆ 'ಹೂವಿನ ತೇರು ಎಳೆಯಬೇಕು, ನೀಲಾವತಿ ಪಟ್ಟಣವಾಗಬೇಕು' ಎಂಬುದು ಸತ್ಯವಾಗಿದೆ.

ನಾಳೆ ದಿನಾಂಕ 3 ಸೋಮವಾರ ರಾತ್ರಿ 9.10ಕ್ಕೆ ಕಂಕಣಧಾರಣೆ ನಡೆಯುವುದು. ನಾಡಿದ್ದು ಮಂಗಳವಾರ ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರು ಆಗಮಿಸುವುದು. ಅಂದು ರಾತ್ರಿ ಅರಿಶಿಣ, ಎಣ್ಣೆ ಕಾರ್ಯ ನಡೆಯುವುದು. ಆನೆಕೊಂಡ ಶ್ರೀ ಬಸವೇಶ್ವರ ದೇವರನ್ನು ಆಹ್ವಾನಿಸಲಾಗುವುದು.

**ರಂಜಾನ್ ರೋಜಾ ಸಮಯ**
ದಿನಾಂಕ - 03 - 03 - 2025
ಇಫ್ತಾರ್ - 6 - 40
ದಿನಾಂಕ - 04 - 03 - 2025
ಸಹೇರಿ - 5 - 22


# ಹೃತ್ಪೂರ್ವಕ ಕೃತಜ್ಞತೆಗಳು



ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ
ಅಧ್ಯಕ್ಷರಾಗಿ ಶ್ರೀ ಡಿ.ತಿರುಪತಿ ಹಾಗೂ
ಉಪಾಧ್ಯಕ್ಷರಾಗಿ ಶ್ರೀ ಗುತ್ತೂರು ಪರಸಪ್ಪ
ಹಾಗೂ ನಿರ್ದೇಶಕರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲು
ಸಹಕರಿಸಿದ ಕಾಡಜ್ಜಿ ಹಾಗೂ ನಾಗರಕಟ್ಟೆ, ಗ್ರಾಮದ ಎಲ್ಲಾ ಹಿರಿಯರಿಗೂ
ಹಾಗೂ ಸರ್ವ ಸದಸ್ಯರಿಗೂ ಮತ್ತು ಗ್ರಾಮ ಪಂಚಾಯಿತಿ ಸದಸ್ಯರಿಗೂ
ಹೃದಯ ಪೂರ್ವಕ ಕೃತಜ್ಞತೆಗಳು.



ಶ್ರೀ ಡಿ. ತಿರುಪತಿ
ಅಧ್ಯಕ್ಷರು,
ಎಸ್‌ಡಿಎಂಸಿ ಅಧ್ಯಕ್ಷರು
ಕಾಡಜ್ಜಿ.

ಶ್ರೀ ಗುತ್ತೂರು ಪರಸಪ್ಪ
ಉಪಾಧ್ಯಕ್ಷರು
ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ



# ತೃತೀಯ ಪುಣ್ಯಸ್ಮರಣೆ



ದಿ. ಶ್ರೀಮತಿ ಎಸ್.ಕೆ. ಶಾಂತಮ್ಮನವರು

ಭೌತಿಕವಾಗಿ ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಜನನ : 24.02.1951 ನಿಧನ : 03.03.2022

ಪತಿ : ಕೃಷ್ಣಪ್ಪ ಸಾರಥಿ, ನಿವೃತ್ತ ಹಿರಿಯ ಆರೋಗ್ಯ ನಿರೀಕ್ಷಕರು
ಪುತ್ರಿ : ಡಾ. ಎಸ್.ಕೆ. ನಾಗವೇಣಿ, ಆರ್‌ಎಂಓ, ಸಿ.ಜಿ. ಆಸ್ಪತ್ರೆ, ದಾವಣಗೆರೆ.
ಅಳಿಯ : ಮಂಜುನಾಥ್ ಕೆ.ಹೆಚ್.
ಮೊಮ್ಮಕ್ಕಳು : ಕು. ಅಕ್ಷತಾ ಕೆ.ಎಂ. ಚಿ. ಚೇತನ್ ಕುಮಾರ್ ಕೆ.ಎಂ.
ಹಾಗೂ ಸಾರಥಿ ಬಂಧು – ಮಿತ್ರರು.

ssims SPARSH CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 6ನೇ ಮಾರ್ಚ್, 2025 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

# ಕೈಲಾಸ ಶಿವಗಣಾರಾಧನೆ




ಶರಣ ಮಾಗನೂರು ಚನ್ನಬಸವನ ಗೌಡರು
ಮತ್ತು ಸಹೋದರರು, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.
ಲಿಂ|| ಶರಣ ಮಾಗನೂರು ಬಸಪ್ಪನವರ ದ್ವಿತೀಯ ಪುತ್ರ,



ಜನನ: 26.01.1937 ಮರಣ: 28.02.2025

ಶರಣ ಮಾಗನೂರು ಸೋಮಶೇಖರ ಗೌಡರು

ಇವರು ದಿನಾಂಕ : 28-02-2025ರ ಶುಕ್ರವಾರ ಬೆಳಗ್ಗೆ 4-30 ಗಂಟೆಗೆ ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ : 04-03-2025ರ ಮಂಗಳವಾರ ಬೆಳಗ್ಗೆ 11-30 ಕ್ಕೆ
ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನ, ಶ್ರೀ ಮಾಗನೂರು ಬಸಪ್ಪ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲಾಗುವುದು.
ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು :
ಶರಣೆ ಗಿರಿಜಮ್ಮ ಮಾಗನೂರು ಸೋಮಶೇಖರ ಗೌಡರು
ಶರಣೆ ಸುರೇಖ ಮಾಗನೂರು ಅನಿಮಿಷ ಗೌಡರು
ಶರಣೆ ಕಾತ್ಯಾಯಿನಿ ಮತ್ತು ಶರಣ ವೈ.ಎಂ. ಬಸವರಾಜ್
ಶರಣೆ ರಾಜೇಶ್ವರಿ ಮತ್ತು ಶರಣ ಕೆ.ಪಿ. ಶಶಿಧರ
ಶರಣ ಮಾಗನೂರು ಚಿನ್ಮಯ್ ಗೌಡರು
ಮಾಗನೂರು ಕುಟುಂಬದ ವರ್ಗದವರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas